ದಾಲ್ಚಿನ್ನಿ ಗಿಡಗಳನ್ನು ರಕ್ಷಿಸಿ.

ಶಿರಸಿ, ಯಲ್ಲಾಪುರ ಮತ್ತು ಸಿದ್ಧಾಪುರದ ಅರಣ್ಯದಲ್ಲಿರುವ ದಾಲ್ಚಿನ್ನಿ ಗಿಡಗಳ ಎಲೆಗಳನ್ನು ಕಟಾವು ಮಾಡುವ ಗುತ್ತಿಗೆಯನ್ನು ಅರಣ್ಯ ಇಲಾಖೆ ನೀಡಿದೆ. ಇದರಿಂದ ಈಗಾಗಲೇ ನಾಶವಾಗುತ್ತಿರುವ ಅರಣ್ಯದ ಸಂಪತ್ತಿನ ಜೊತೆ ಬಹಳ ವಿರಳವಾಗುತ್ತಿರುವ ದಾಲ್ಚಿನ್ನಿ ಗಿಡವೂ ಸಂಪೂರ್ಣವಾಗಿ ನಾಶ ಹೊಂದುವ ಸಂಭವವಿದೆ. ಆದುದರಿಂದ ಈ ಗಿಡದ ರಕ್ಷಣೆಗಾಗಿ ಜನರು ಎಚ್ಚೆತ್ತು ವಿರೋಧ ವ್ಯಕ್ತಪಡಿಸುವ ಸಮಯ ಬಂದಿದೆ.

ಈಗಾಗಲೆ ದಾಲ್ಚಿನ್ನಿ ಗಿಡವನ್ನು ನಾಶಪಡಿಸುವ ತಂಡಗಳು ಸಿದ್ಧಾಪುರ, ಯಲ್ಲಾಪುರದ ಅರಣ್ಯದಲ್ಲಿ ಕೆಲಸ ಆರಂಭಿಸಿವೆ. ಅಲ್ಲಿರುವ ಸ್ಥಳೀಯ ನಾಗರೀಕರು ದಾಲ್ಚಿನ್ನಿ ಗಿಡದ ನಾಶವನ್ನು ತಡೆಯಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

ಈ ಗುತ್ತಿಗೆಯನ್ನು ನೀಡಿದ ಅರಣ್ಯ ಇಲಾಖೆಯ ಉಚ್ಚ ಅಧಿಕಾರಿಗಳಿಗೆ ಪತ್ರ ಬರೆದು ಟೆಂಡರನ್ನು ರದ್ದುಪಡಿಸಿ, ದಾಲ್ಚಿನ್ನಿ ಗಿಡವನ್ನು ರಕ್ಷಿಸುವಂತೆ ಕೇಳಿಕೊಳ್ಳಲಾಗಿದೆ.

ಅರಣ್ಯ ಇಲಾಖೆಯು ಶೀಘ್ರವಾಗಿ ಕ್ರಮ ಕೈಗೊಳ್ಳದಿದ್ದರೆ ಗಿಡದ ರಕ್ಷಣೆಗಾಗಿ ವ್ಯಾಪಕವಾದ ಚಳುವಳಿಯನ್ನು ಪ್ರಾರಂಭಿಸಬೇಕಾಗಿದೀತು.

---

ಪತ್ರಿಕಾ ಪ್ರಕಟಣೆ.

---

ಪರಿಸರ ಸಂರಕ್ಷಣಾ ಕೇಂದ್ರ

ಶಿರಸಿ,
ದಿನಾಂಕ: 27-11-1991.

ದಾಲ್ಚಿನ್ನಿ ಗಿಡಗಳನ್ನು ರಕ್ಷಿಸಿ

ಶಿರಸಿ, ಯಲ್ಲಾಪುರ ಮತ್ತು ಸಿದ್ಧಾಪುರದ ಅರಣ್ಯದಲ್ಲಿರುವ ದಾಲ್ಚಿನ್ನಿ ಗಿಡಗಳ ಎಲೆಗಳನ್ನು ಕಟಾವು ಮಾಡುವ ಗುತ್ತಿಗೆಯನ್ನು ಅರಣ್ಯ ಇಲಾಖೆ ನೀಡಿದೆ. ಇದರಿಂದ ಈಗಾಗಲೆ ನಾಶವಾಗುತ್ತಿರುವ ಅರಣ್ಯದ ಸಂಪತ್ತಿನ ಜೊತೆ ಬಹಳ ವಿರಳವಾಗುತ್ತಿರುವ ದಾಲ್ಚಿನ್ನಿ ಗಿಡವೂ ಸಂಪೂರ್ಣವಾಗಿ ನಾಶ ಹೊಂದುವ ಸಂಭವವಿದೆ. ಆದುದರಿಂದ ಈ ಗಿಡದ ರಕ್ಷಣೆಗಾಗಿ ಜನರು ಎಚ್ಚೆತ್ತು ವಿರೋಧ ವ್ಯಕ್ತಪಡಿಸುವ ಸಮಯ ಬಂದಿದೆ.

ಈಗಾಗಲೆ ದಾಲ್ಚಿನ್ನಿ ಗಿಡಗಳನ್ನು ನಾಶಪಡಿಸುವ ತಂಡಗಳು ಸಿದ್ಧಾಪುರ, ಯಲ್ಲಾಪುರದ ಅರಣ್ಯದಲ್ಲಿ ಕೆಲಸ ಆರಂಭಿಸಿವೆ. ಅಲ್ಲಿರುವ ಸ್ಥಳೀಯ ನಾಗರೀಕರು ದಾಲ್ಚಿನ್ನಿ ಗಿಡದ ನಾಶವನ್ನು ತಡೆಯಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

ಈ ಗುತ್ತಿಗೆಯನ್ನು ನೀಡಿದ ಅರಣ್ಯ ಇಲಾಖೆಯ ಉಚ್ಚ ಅಧಿಕಾರಿಗಳಿಗೆ ಪತ್ರ ಬರೆದು ಟೆಂಡರನ್ನು ರದ್ದುಪಡಿಸಿ, ದಾಲ್ಚಿನ್ನಿ ಗಿಡವನ್ನು ರಕ್ಷಿಸುವಂತೆ ಕೇಳಿಕೊಳ್ಳಲಾಗಿದೆ.

ಅರಣ್ಯ ಇಲಾಖೆಯು ಶೀಘ್ರವಾಗಿ ಕ್ರಮಕೈಗೊಳ್ಳದಿದ್ದರೆ ಗಿಡದ ರಕ್ಷಣೆಗಾಗಿ ವ್ಯಾಪಕವಾದ ಚಳುವಳಿಯನ್ನು ಪ್ರಾರಂಭಿಸಬೇಕಾದೀತು.

---

ಪತ್ರಿಕಾ ಪ್ರಕಟಣೆ

---

ಪರಿಸರ ಸಂರಕ್ಷಣಾ ಕೇಂದ್ರ

ಶಿರಸಿ,
ದಿನಾಂಕ: 27-11-1991.

## ದಾಲ್ಚಿನ್ನಿ ನಾಶ ನಿಲ್ಲಿಸಲು ಚಳುವಳಿ ಪ್ರಾರಂಭ.

ಹುಣಸಿ ಕ್ಷೇತ್ರದ ವಾನಳ್ಳಿ, ಗುರುವಳ್ಳಿ ಅರಣ್ಯದಲ್ಲಿ ದಾಲ್ಚಿನ್ನಿ ಗಿಡಗಳ ನಾಶವನ್ನು ತಡೆದು ನಾಗರೀಕರು ಚಳುವಳಿಯನ್ನು ಆರಂಭಿಸಿದ್ದಾರೆ. ದಿನಾಂಕ 8-12-91 ರಂದು ಊರ ನಾಗರೀಕರು ಮುಂದಾಗಿ ಕೆಲಸವನ್ನು ಸ್ಥಗಿತಗೊಳಿಸಿದರು. ಪರಿಸರ ಸಂರಕ್ಷಣಾ ಕೇಂದ್ರ ನೀಡಿದ ಕರೆಯನ್ನು ಮನ್ನಿಸಿ ಈ ಚಳುವಳಿ ಪ್ರಾರಂಭವಾಗಿದೆ. ಕೆಲ ವರ್ಷಗಳ ಹಿಂದೆ ಇದೇ ಅರಣ್ಯದಲ್ಲಿ ಅಪ್ಪಿಕೋ ಚಳುವಳಿ ಬಹಳ ತೀವ್ರ ಸ್ವರೂಪದಲ್ಲಿ ಯಶಸ್ವಿಯಾಗಿ ನಡೆದಿದ್ದನ್ನು ಸ್ಮರಿಸಿಕೊಳ್ಳಬಹುದಾಗಿದೆ. ಈಗಾಗಲೇ ಬಕ್ಕಳ – ಬಿಡಾಳ ಕ್ಷೇತ್ರದಿಂದ ಒಂದು ಲಾರಿ ದಾಲ್ಚಿನ್ನಿಯನ್ನು ಸಾಗಿಸಲಾಗಿದೆ.

ಈ ಕ್ರಮವು ಕೋರ್ಟು ಆದೇಶವನ್ನು ಅವಮಾನ್ಯ ಮಾಡಿ ನಡೆಸುತ್ತಿರುವ ವಿಷಯ ಈಗಾಗಲೇ ಜನರಿಗೆ ತಿಳಿದು ಬಂದಿದೆ. ಕೋರ್ಟ್ ಆದೇಶದ ಮೇರೆಗೆ ಯಥಾ ಸ್ಥಿತಿಯನ್ನು ಕಾಪಾಡಿಕೊಂಡು ಬಾರದೆ ಪುನಃ ದೊಡ್ಡ ಪ್ರಮಾಣದಲ್ಲಿ ಗುತ್ತಿಗೆದಾರರು ಕೆಲಸ ಪ್ರಾರಂಭಿಸಿರುವುದು ಇಡೀ ಪ್ರಕರಣದ ಮೇಲೆ ಸಂಶಯವನ್ನು ಉಂಟುಮಾಡುತ್ತಿದೆ.

ಪರಿಸರ ಸಂರಕ್ಷಣಾ ಕೇಂದ್ರವು ಈ ತರಹದ ದಾಲ್ಚಿನ್ನಿ ಗಿಡನಾಶದ ಗುತ್ತಿಗೆ ಪದ್ಧತಿಯನ್ನು ಸಂಪೂರ್ಣವಾಗಿ ರದ್ದುಪಡಿಸಲು ಆಗ್ರಹಿಸಿ ಅರಣ್ಯ ಇಲಾಖೆಯ ಉಚ್ಚ ಅಧಿಕಾರಿಗಳಿಗೆ ಹಿಂದೆಯೇ ಪತ್ರ ಬರೆದಿದೆ.

ಈಗಾಗಲೇ ಹಲವಾರು ಅಮೂಲ್ಯವಾದ ಗಿಡಗಳನ್ನು ಕಳೆದುಕೊಂಡಿರುವ ಉತ್ತರಕನ್ನಡದ ಅರಣ್ಯದಲ್ಲಿ ದಾಲ್ಚಿನ್ನಿ ಗಿಡಗಳು ಸಂಪೂರ್ಣವಾಗಿ ನಾಶ ಹೊಂದುವುದು ಖಚಿತ. ಈ ಕಾರಣದಿಂದಾಗಿ ಜನರು ಜಾಗೃತಗೊಂಡು ಈ ನಾಶವನ್ನು ತಡೆಯಲು ವಿವಿಧ ಕ್ಷೇತ್ರಗಳಲ್ಲಿ ಚಳುವಳಿಯನ್ನು ಪ್ರಾರಂಭಿಸುವಂತೆ ಪರಿಸರ ಸಂರಕ್ಷಣಾ ಕೇಂದ್ರ ಕೇಳಿಕೊಳ್ಳುತ್ತದೆ.

ಪತ್ರಿಕಾ ಪ್ರಕಟಣೆ :

ಶಿರಸಿ,
ದಿನಾಂಕ: 12-12-1991.

ಪರಿಸರ ಸಂರಕ್ಷಣಾ ಕೇಂದ್ರ
ಹುಲೇಮಳಗಿ ಕುಪ್ಪದ
ಶಿರಸಿ (ಉ. ಕನ್ನಡ) ೫೮೧ ೪೦೧

PSK/PRESS

## ಬೇಡ್ತಿ – ಅಘನಾಶಿನಿ ವಿರುದ್ಧ ಸಂಯುಕ್ತ ಹೋರಾಟ

ರಾಜ್ಯ ಸರಕಾರ ಬೇಡ್ತಿ ಮತ್ತು ಅಘನಾಶಿನಿ ಜಲವಿದ್ಯುತ್ ಯೋಜನೆಗಳನ್ನು ಕಾರ್ಯಗತಗೊಳಿಸುವ ನಿರ್ಣಯ ಮಾಡಿದ್ದು, ಈ ನಿರ್ಣಯದ ವಿರುದ್ಧ ನೇರವಾಗಿ ಸಂಯುಕ್ತ ಹೋರಾಟ ನಡೆಸುವ ನಿರ್ಣಯವನ್ನು ಪರಿಸರ ಸಂರಕ್ಷಣಾ ಕೇಂದ್ರ ತೆಗೆದುಕೊಂಡಿದೆ. ಇತ್ತೀಚೆಗೆ ನಡೆದ ಪರಿಸರ ಆಸಕ್ತರ ಸಭೆಯಲ್ಲಿ ಈ ಕುರಿತು ವಿವರವಾಗಿ ಚರ್ಚಿಸಿ ಈ ನಿರ್ಣಯಕ್ಕೆ ಬರಲಾಯಿತು.

ಬೇಡ್ತಿ ಯೋಜನೆಗಾಗಿ ಈ ವರ್ಷದ ಕೆಲಸ ಪ್ರಾರಂಭಿಸುವದಾಗಿ ವಿದ್ಯುತ್ ಮಂತ್ರಿಗಳ ಹೇಳಿಕೆಯನ್ನು ಕೇಂದ್ರ ತೀವ್ರವಾಗಿ ಖಂಡಿಸುತ್ತದೆ. ಪರಿಸರ ನಾಶದ ಜೊತೆಗೆ ಜನರನ್ನು ನಿರ್ಗತಿಕರನ್ನಾಗಿ ಮಾಡುವ ಈ ಯೋಜನೆಗಳ ವಿರುದ್ಧ ಹಳ್ಳಿ – ಹಳ್ಳಿಯಲ್ಲಿ ಜನ ಆಂದೋಲನಕ್ಕಾಗಿ ಸಂಘಟನೆಯನ್ನು ಮಾಡಲಾಗುವದು. ಬೇಡ್ತಿ ಮತ್ತು ಅಘನಾಶಿನಿ ಯೋಜನೆಯ ಎಲ್ಲಿಯಾದರೂ ಕೆಲಸ ಆರಂಭಿಸಿದಲ್ಲಿ ಜನರು ಸಂಘಟಿತರಾಗಿ ನೇರವಾಗಿ ಚಳುವಳಿಯನ್ನು ಆರಂಭಿಸುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ಹಳ್ಳಿ ಮಟ್ಟದಲ್ಲಿ ಈ ಬಗ್ಗೆ ಜನಜಾಗೃತಿಯನ್ನು ಉಂಟುಮಾಡುವ ಕೆಲಸವನ್ನು ಆರಂಭಿಸಲಾಗುವದು.

ರಾಜಕೀಯ ಪಕ್ಷಗಳು ತಮ್ಮ ಸ್ವಾರ್ಥಕ್ಕಾಗಿ ಬೇಡ್ತಿ ಮತ್ತು ಅಘನಾಶಿನಿ ಹೋರಾಟವನ್ನು ಬೇರೆಯಾಗಿ ನೋಡುತ್ತಿದ್ದಾರೆ. ಆದರೆ ಈ ಎರಡೂ ಹೋರಾಟಗಳು ಸಂಯುಕ್ತವಾಗಿ ನಡೆಸಿ ಬಲವೃದ್ಧಿಗೊಳ್ಳುವಂತೆ ಮಾಡುವ ನಿರ್ಣಯ ಪರಿಸರ ಸಂರಕ್ಷಣಾ ಕೇಂದ್ರದ್ದಾಗಿದೆ. ಈ ಸಂಯುಕ್ತ ಹೋರಾಟದ ಜೊತೆಗೆ ದೇಶದಲ್ಲಿ ನರ್ಮದಾ, ಟಿಹರಿ ಅಣೆಕಟ್ಟಿನ ವಿರೋಧಿ ಚಳುವಳಿಗಳಿಗೆ ಸಮನಾಗಿ ಬೇಡ್ತಿ – ಅಘನಾಶಿನಿ ಚಳುವಳಿಯನ್ನು ರಾಷ್ಟ್ರ ಮಟ್ಟದ ಚಳುವಳಿಯನ್ನಾಗಿಸಿ ರಾಷ್ಟ್ರ ಮಟ್ಟದ ವ್ಯಾಪಕ ಪ್ರಚಾರ ನೀಡಲು ನಿರ್ಣಯಿಸಲಾಗಿದೆ. ಇಲ್ಲಿ ನಾಶವಾಗುವ ಕಾಡು ಉಷ್ಣವಲಯ ಪ್ರದೇಶದ ವಿಶಿಷ್ಟ ವನ್ಯ ಪ್ರದೇಶವಾಗಿದೆ. ಇದರ ಸಂರಕ್ಷಣೆ ಇಡೀ ಜಗತ್ತಿನ ಜವಾಬ್ದಾರಿ ಆಗಿರುವ ಈ ರಾಜ್ಯದ ಸರಕಾರ ಇದನ್ನು ನಾಶಪಡಿಸಲು ಸಾಧ್ಯವಿಲ್ಲ.

ಭಗೀರಥಿ ನದಿಗೆ ಅಡ್ಡವಾಗಿ ಟೆಹರಿಯಲ್ಲಿ ಕಟ್ಟುತ್ತಿರುವ ಅಣೆಕಟ್ಟಿನ ವಿರುದ್ಧ ಚಳುವಳಿ ಮಾಡುತ್ತಿರುವ ಚಿಪ್ಕೊ ನೇತಾರ ಸುಂದರಲಾಲ ಬಹುಗುಣರನ್ನು ಉತ್ತರ ಪ್ರದೇಶ ಸರಕಾರ ಬಂಧಿಸಿ ಸೆರೆಮನೆಯಲ್ಲಿ ಇಟ್ಟಿದೆ. ಅವರು ಕಳೆದ 12 ದಿನಗಳಿಂದ ಉಪವಾಸ ಸತ್ಯಾಗ್ರಹದಲ್ಲಿದ್ದಾರೆ. ಅವರನ್ನು ತತ್‌ಕ್ಷಣ ಬಿಡುಗಡೆ ಮಾಡುವಂತೆ ಉತ್ತರ ಪ್ರದೇಶದ ಮುಖ್ಯಮಂತ್ರಿಗಳಿಗೆ ತಂತಿ ಸಂದೇಶ ಕಳುಹಿಸಲಾಗಿದೆ. ಈ ಗಂಗಾನದಿಯನ್ನು ಉಳಿಸುವ ಚಳುವಳಿಗೆ ಮತ್ತು ಅಲ್ಲಿಯ ಭೂಕಂಪದ ಸಂತ್ರಸ್ತರಿಗಾಗಿ ಧನ ಸಹಾಯ ಒಟ್ಟುಮಾಡಿ ಸುಂದರಲಾಲ ಬಹುಗುಣರಿಗೆ ಕಳಿಸಲು ನಿರ್ಧರಿಸಲಾಗಿದೆ. ಆಸಕ್ತಿ ಇದ್ದವರು ಪರಿಸರ ಸಂರಕ್ಷಣಾ ಕೇಂದ್ರ, ಹುಳೇಮಳಗಿ ಬ್ರದರ್ಸ್, ಜೋಶಿಮಠ, ಸಿರ್ಸಿ ಇವರನ್ನು ದಯವಿಟ್ಟು ಸಂಪರ್ಕಿಸಿ.

ಬೇಡ್ತಿ ಮತ್ತು ಅಘನಾಶಿನಿ ಯೋಜನೆ ನಿಲ್ಲಿಸಲು ಮುಖ್ಯಮಂತ್ರಿ, ವಿದ್ಯುಚ್ಛಕ್ತಿ ಮಂತ್ರಿ ಮತ್ತು ಕೇಂದ್ರ ಪರಿಸರ ಖಾತೆಗೆ ವಿವರವಾದ ಪತ್ರವನ್ನು ಕೇಂದ್ರ ಕಳುಹಿಸಿದೆ.

ಪತ್ರಿಕಾ ಪ್ರಕಟಣೆ :

ದಿನಾಂಕ: 9-3-1992

ಪಾಂಡುರಂಗ ಹೆಗಡೆ

ಪರಿಸರ ಸಂರಕ್ಷಣಾ ಕೇಂದ್ರ.

PSK/PRESS

## ಓ.ಡಿ.ಎ. ತರಬೇತಿ

### ಅರಣ್ಯ ಇಲಾಖೆಯ ಮುಂದು ಹೆಜ್ಜೆ

ಉತ್ತರ ಕನ್ನಡದ ಜನರ ಸಹಭಾಗಿತ್ವದೊಂದಿಗೆ ಅರಣ್ಯ ಬೆಳೆಸುವ ಯೋಜನೆ ಮಾಡುತ್ತೇವೆ ಎಂದು ಭರವಸೆ ನೀಡಿದ ಇಂಗ್ಲೆಂಡಿನ ಓ.ಡಿ.ಎ. ಯೋಜನೆಯ ಹಣ ಅರಣ್ಯ ಇಲಾಖೆಯವರ ಕೈಗೆ ಸಿಕ್ಕು ದುಂದು ವೆಚ್ಚದಿಂದ ಪೋಲಾಗುತ್ತಿರುವ ಸತ್ಯ ಹೊರ ಬಂದಿದೆ.

ಇತ್ತೀಚೆಗೆ ಗುಲಬರ್ಗಾದಲ್ಲಿ ನಡೆದ ಅರಣ್ಯ ಬೆಳೆಸುವ ತರಬೇತಿಗಾಗಿ 20 ಜನರನ್ನು ಕಳಿಸುವಂತೆ ಸಹ್ಯಾದ್ರಿ ಪರಿಸರ ವರ್ಧಿನಿಯನ್ನು ಕೇಳಿಕೊಳ್ಳಲಾಗಿತ್ತು. ಆದರೆ ಅರಣ್ಯ ಇಲಾಖೆ ತನ್ನದೇ ಒಂದು ಗುಂಪನ್ನು ಕರೆದೊಯ್ದಿತು. ಈ ಗುಂಪಿನಲ್ಲಿ ಅರಣ್ಯ ಗುತ್ತಿಗೆದಾರರು ಇದ್ದರೆಂದು ಹೇಳಲಾಗಿದೆ.

ಅರಣ್ಯ ಇಲಾಖೆಯವರು ಶಿರಸಿಯಿಂದ ನೇರವಾಗಿ ಗುಲಬರ್ಗಾಕ್ಕೆ ಹೋಗಲು ರಾಜ್ಯ ಸರಕಾರಿ ಬಸ್ಸಿನ ವ್ಯವಸ್ಥೆ ಮಾಡಿದರು. ಈ ಬಸ್ಸಿನಲ್ಲಿ ಸ್ಥಳ ಅವಕಾಶವಿದ್ದರೂ ಸಹ ಪರಿಸರ ವರ್ಧಿನಿಯ 8 ಜನರನ್ನು ಕರೆದೊಯ್ಯಲು ಒಪ್ಪದೇ ತನ್ನ 'ಧನಿಯ' ನ್ನು ಕಾಪಾಡಿಕೊಂಡಿತು. ಅಲ್ಲದೆ ತರಬೇತಿ ನಡೆದ ನಾಲ್ಕು ದಿನ ಈ ಕೆ.ಎಸ್.ಆರ್.ಟಿ.ಸಿ. ವಾಹನವನ್ನು ಇಟ್ಟುಕೊಂಡು 15 ಸಾವಿರ ರೂಪಾಯಿ ಅನವಶ್ಯಕವಾಗಿ ಪೋಲು ಮಾಡಿದರು. ತರಬೇತಿ ನೀಡುವವರು ವಾಹನದ ಸೌಲಭ್ಯ ಮಾಡುವದಾಗಿ ಹೇಳಿದ್ದರೂ ಅರಣ್ಯ ಇಲಾಖೆ ಸರಕಾರಿ ಬಸ್ಸಿನ ವ್ಯವಸ್ಥೆ ಯಾಕೆ ಮಾಡಿತು? ಅರಣ್ಯ ಇಲಾಖೆ ಪೋಲು ಮಾಡಿದ ಈ ಹಣ ಜನರು ನೀಡಿದ ಕರದಿಂದ ಬಂದಿದ್ದೇ? ಅಥವಾ ಓ.ಡಿ.ಎ. ಹಣವೇ? ಆರಂಭದಿಂದಲೇ ಈ ತರಹದ ಹಣ ಪೋಲಾಗತೊಡಗಿದರೆ ಮುಂದೆ ಈ ಯೋಜನೆಯ ಗತಿ ಏನಾದೀತೆಂದು ಜನರು ಊಹಿಸಿಕೊಳ್ಳಬಹುದು.

ಅರಣ್ಯ ಜಿಲ್ಲೆಯೆಂದು ಪ್ರಸಿದ್ಧಿ ಪಡೆದ ಉತ್ತರ ಕನ್ನಡದಲ್ಲಿ ಅರಣ್ಯವನ್ನು ಬೆಳೆಸಿರುವ ಹಲವಾರು ಸಫಲ ಯೋಜನೆಗಳಿವೆ. ಅರಣ್ಯ ಇಲಾಖೆಯ ತುಳಸಿ ಎಂಬ ಮಹಿಳೆಗೆ ರಾಷ್ಟ್ರ ಮಟ್ಟದ ವೃಕ್ಷಮಿತ್ರ ಪ್ರಶಸ್ತಿ ಬಂದಿದೆ. ಹೀಗಿರುವಾಗ ಬಯಲು ಸೀಮೆಯ ಗುಲಬರ್ಗಾಕ್ಕೆ ಅರಣ್ಯ ಬೆಳೆಸುವ ತರಬೇತಿಗಾಗಿ ಹೋಗಿರುವದು ಹಾಸ್ಯಾಸ್ಪದ.

ಓ.ಡಿ.ಎ. ಯೋಜನೆಯ ಹಣವನ್ನು ಅರಣ್ಯ ಇಲಾಖೆ ಮತ್ತು ರಾಜಕೀಯ ಪಕ್ಷದ ವ್ಯಕ್ತಿಗಳು ಒಂದಾಗಿ ಪೋಲು ಮಾಡುವ ಸತ್ಯ ಎದ್ದು ಕಾಣಿಸುತ್ತಿದೆ. ಸಾಮಾನ್ಯ ಜನರು ಜಾಗೃತರಾಗಿ ಈ ಲೂಟಿಯನ್ನು ತಡೆಯಬೇಕಾಗಿದೆ.

ಪಾಂಡುರಂಗ ಹೆಗಡೆ

ಪತ್ರಿಕಾ ಪ್ರಕಟಣೆ

ದಿನಾಂಕ: 12-3-1992

ಪರಿಸರ ಸಂರಕ್ಷಣಾ ಕೇಂದ್ರ,
ಶಿರಸಿ.

ಪರಿಸರ ಸಂರಕ್ಷಣಾ ಕೇಂದ್ರ
ಹುಲೇಮಳಗಿ ಕಟ್ಟಡ
ಶಿರಸಿ (ಉ. ಕನ್ನಡ) ೫೮೧ ೪೦೧

# ಕೈಗಾದಿಂದ ಸಿರ್ಸಿಗೆ ವಿದ್ಯುತ್ ಲಾಯಿನ್

ಕೈಗಾದಿಂದ ಸಿರ್ಸಿಗೆ ನೇರವಾಗಿ ವಿದ್ಯುತನ್ನು ತರುವ ಉದ್ದೇಶದಿಂದ 400 K.W. ಹ್ಯಾಟೆನ್ಷನ್ ಲಾಯಿನನ್ನು ಹಾಕುವ ಸಿದ್ಧತೆ ನಡೆಯುತ್ತಿದೆ. ಇದರ ಸರ್ವೆ ಕಾರ್ಯ 1992 ರಲ್ಲಿ ಆಗಿದ್ದು ಆಗ ರಾಜ್ಯ ಸರಕಾರ ಸಂಯುಕ್ತ ಕರ್ನಾಟಕ (ದಿ: 25-12-1992) ದಲ್ಲಿ ನೋಟೀಸ್ ನೀಡಿ ಯಾರದ್ದಾದರೂ ತಕರಾರು ಇದ್ದಲ್ಲಿ ಅರ್ಜಿ ಸಲ್ಲಿಸಲು ಕೇಳಿಕೊಂಡಿತ್ತು. ಆಗ ಅದನ್ನು ಓದಿದವರು, ನೋಡಿದವರು ಇಲ್ಲವಾಗಿದ್ದರಿಂದ ಯಾರೂ ತಕರಾರು ಅರ್ಜಿ ಸಲ್ಲಿಸಿದ್ದು ಇಲ್ಲ.

ಈಗ ಈ ಕೆಲಸವನ್ನು ಸೆಂಟ್ರಲ್ ಪಾವರ್ ಗ್ರಿಡ್ಸ ಕಾರ್ಪೊರೇಷನ್ ( CENTRAL POWER GRID CORPORATION ) ವಹಿಸಿಕೊಂಡಿದೆ. ಇದನ್ನು ಅವರು ಕಾರ್ಯಗತ ಗೊಳಿಸಲು ನಾಶಿಕದ ಜ್ಯೋತಿ ಕನಸ್ಟ್ರಕ್ಷನ್ ಕಂಪನಿ (JYOTI CONSTRUCTION CO. LTD., ) ಗೆ ಟೆಂಡರ್ ಮೂಲಕ ಗುತ್ತಿಗೆ ನೀಡಲಾಗಿದೆ. ಇವರು ಕಳೆದ ಆರು ತಿಂಗಳಿಂದ ಸಿರ್ಸಿ ಸುತ್ತಮುತ್ತ ಸರ್ವೆ ಕಾರ್ಯ ಮಾಡುತ್ತಿದ್ದು ಈಗ ಕೊನೆಯದಾಗಿ ಲಾಯಿನ್ ಹಾಕುವ ಮಾರ್ಗವನ್ನು ನಿರ್ಧರಿಸಿದ್ದಾರೆ.

ಈ ಕಂಪನಿಯವರು ಸರ್ವೆ ಮಾಡಲು ಹೋದಾಗ ಗ್ರಾಮಸ್ಥರು ವಿಚಾರಿಸಲಾಗಿ ಅವರಿಗೆ ಇದು ಕೇಂದ್ರ ಸರಕಾರದ ಯೋಜನೆ, ನೀವೇನೂ ಮಾಡಲು ಬರುವದಿಲ್ಲ ಎಂದು ಉತ್ತರ ಬಂದಿದೆ. ಆದುದರಿಂದ ಗ್ರಾಮಸ್ಥರು ನಮ್ಮ ಹತ್ತಿರ ಬಂದಾಗ ನಾವು ಕೆಳಗಿನಂತೆ ಮಾಹಿತಿ ಸಂಗ್ರಹಿಸಿದ್ದೇವೆ.

ಲಾಯಿನ್ ಎಳೆಯುವ ಕಂಪನಿಯ ಅಧಿಕಾರಿಗಳ ಜೊತೆ ಮಾತನಾಡಿದಾಗ ನಮಗೆ ತಿಳಿದು ಬಂದ ವಿಷಯ ಹೀಗಿದೆ :—

* ಸಿರ್ಸಿಯ ವಿದ್ಯುತ್ ಪೂರೈಕೆಯಲ್ಲಿ ಕೊರತೆ ಇರುವುದರಿಂದ ಈ ಹ್ಯಾಟೆನ್ಷನ್ ಲಾಯಿನ್ ಅಗತ್ಯವಿದೆ
* ಸಿರ್ಸಿ — ಸಿದ್ದಾಪುರ ಪ್ರದೇಶವನ್ನು ಉದ್ಯಮಗಳ ಸ್ಥಾಪನೆಗಾಗಿ ಸರಿಯಾದ ಸ್ಥಳವೆಂದು ಗುರುತಿಸಲಾಗಿದ್ದರಿಂದ ಮುಂದೆ ಅದರ ವಿದ್ಯುತ್ ಪೂರೈಕೆಗಾಗಿ 400 KW ಲಾಯಿನ್ ಅಗತ್ಯವಿದೆ.
* ಈ ಲಾಯಿನ್ ಸಿರ್ಸಿಯಿಂದ ಮುಂದೆ ಎಲ್ಲಿಗೂ ಹೋಗುವುದಿಲ್ಲ.
* ಈಗ ಸಧ್ಯ ಸಿರ್ಸಿಯ ಹತ್ತಿರ ಇರುವದು 240 KW ಲಾಯಿನ್, ಆದರೆ ಉದ್ಯಮಗಳ ಸ್ಥಾಪನೆಗೆ 400 KW ಲಾಯಿನ್ ಅಗತ್ಯವಿದೆ.
* ಲಾಯಿನ್ ಎಳೆಯುವಾಗ ಕೇವಲ ಆರು ಮೀಟರ (19 ಫೂಟ್) ಗಳಲ್ಲಿರುವ ಗಿಡಗಳನ್ನು ಮಾತ್ರ ಕಡಿಯುತ್ತೇವೆ. (ಈ ಹಿಂದೆ ಇರುವಂತೆ ಸ್ವಚ್ಛವಾಗಿ ಕಡಿಯುವುದಿಲ್ಲ. (ಹೀಗೆ ಕಡಿಯಬಾರದೆಂದು ಕೇಂದ್ರ ಪರಿಸರ ಖಾತೆಯು ಆದೇಶಿಸಿದೆ ).
* ಈ ಲಾಯಿನ್ ಅನ್ನು ಗದ್ದೆ, ತೋಟ, ಮತ್ತು ಮನೆಗಳಿಂದ ದೂರದಲ್ಲಿ ಒಯ್ಯಲಾಗುವದು. ಆದುದರಿಂದ ಜನರು ಆತಂಕ ಪಡಬೇಕಾದ ಅವಶ್ಯಕತೆ ಇಲ್ಲ.

—2

(ಜಿಲ್ಲಾ ಅಡಿಕೆ ಬೆಳೆಗಾರರ ಸಂಘ ಮತ್ತು ಪರಿಸರ ಕಾರ್ಯಕರ್ತರು) ಈ ಕಂಪನಿಯ ಉಚ್ಚ ಅಧಿಕಾರಿಗಳನ್ನು ಭೇಟಿ ಮಾಡಿದಾಗ ಅವರು ಜನರ ಜೊತೆ ಬಂದು ಚರ್ಚಿಸಲು ಒಪ್ಪಿಗೆ ಕೊಟ್ಟಿದ್ದರು. ಅದರಂತೆ ರವಿವಾರ ದಿ: 18-12-94 ರಂದು ಗುಬ್ಬಿಗದ್ದೆ ಶಾಲೆಯಲ್ಲಿ ಸಾರ್ವಜನಿಕರು ಮತ್ತು ಕಂಪನಿಯ ಅಧಿಕಾರಿಗಳ ಜೊತೆ ಚರ್ಚೆ ಇಟ್ಟುಕೊಳ್ಳಲಾಗಿದೆ (ಬೆಳಿಗ್ಗೆ 10-30 ಗಂಟೆಗೆ). ಆದಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಬಂದರೆ ಉತ್ತಮ. ನೇರವಾಗಿ ಅಧಿಕಾರಿಗಳ ಜೊತೆ ಚರ್ಚಿಸಿ ವಿಚಾರ ತಿಳಿದುಕೊಳ್ಳಲು ಆಸ್ಪದವಾಗುತ್ತದೆ.

<u>ನಮ್ಮ ಅನಿಸಿಕೆಯ ಪ್ರಕಾರ ಮುಖ್ಯ ವಿಷಯ</u> :

- ಕೈಗಾದಿಂದ ವಿದ್ಯುತ್ ಪಡೆದು ಸಿರ್ಸಿ - ಸಿದ್ದಾಪುರ ಪ್ರದೇಶವನ್ನು ಸಂಪೂರ್ಣವಾಗಿ ಉದ್ದಿಮೆಗಳ ಸ್ಥಾಪನೆಗೆ ಅವಕಾಶ ಮಾಡಿಕೊಟ್ಟು ಪ್ರಗತಿಯ ಹೆಸರಿನಲ್ಲಿ ಗ್ರಾಮೀಣ ಪರಿಸರ ಮತ್ತು ಜನಜೀವನವನ್ನು ನಾಶಗೊಳಿಸಲು ಅವಕಾಶ ಮಾಡಿಕೊಡುವುದೇ ?

- ಈ ತರಹದ ಅಭಿವೃದ್ಧಿ ನಮಗೆ ಬೇಡವಾದಲ್ಲಿ ಈ ಲಾಯಿನ್ ಅವಶ್ಯಕತೆ ಇದೆಯೇ?

- ಈ ಲಾಯಿನ್ ಜೊತೆಗೆ ಇನ್ನೂ ಮೂರು ಲಾಯಿನ್ ಮುಂದಿನ ವರ್ಷಗಳಲ್ಲಿ ಬರಲಿದೆ. ಬಂದರೆ ಅತ್ತ ಉತ್ತರ ಕನ್ನಡದಲ್ಲಿರುವ ಅಲ್ಪ ಕಾಡು ನಾಶವಾಗಲು ಆಸ್ಪದ ಮಾಡಿಕೊಡುತ್ತದೆ.

- ಕೈಗಾ ವಿದ್ಯುತ್ ಉತ್ಪಾದಿಸುತ್ತದೆ ಎಂಬುದರ ಬಗ್ಗೆ ಸಂಶಯ ಇರುವಾಗ ಅನವಶ್ಯಕವಾಗಿ ಲಾಯಿನ್ ಹಾಕುವದು ಸೂಕ್ತವೇ ?

- ಈ ಬಗ್ಗೆ ಜನರು ಸಾಮೂಹಿಕವಾಗಿ ನಿರ್ಧಾರ ತೆಗೆದುಕೊಳ್ಳುವುದು ಅವಶ್ಯ.

- ನಮ್ಮ ಭವಿಷ್ಯದ ನಿರ್ಧಾರವನ್ನು ಇಂದೇ ಮಾಡಬೇಕಾದ ಸಮಯ ಬಂದೊದಗಿದೆ.

ಪರಿಸರ ಸಂರಕ್ಷಣಾ ಕೇಂದ್ರ
ಹುಲೇಮಳಗಿ ಬ್ರದರ್ಸ್
ಶಿರಸಿ 581 401

ಫೋನ್- 75139.

# ದಾಸನಕೊಪ್ಪದಲ್ಲಿ ಹಳೆ ತಳಿ ಸಂರಕ್ಷಣೆ ಬಗ್ಗೆ ಚರ್ಚೆ

ಅರೆ ಮಲೆನಾಡು ಪ್ರದೇಶವಾದ ದಾಸನಕೊಪ್ಪದ ರೈತರಾದ ನರಸಿಂಹಪ್ಪನವರು "ಹೊಸ ತಳಿಗಳಿಗೆ ನೀರಾವರಿ ಬೇಕು, ಆದರೆ ಹಳೆ ತಳಿಗಳು ಮಳೆ ಆಧಾರಿತ ಬೇಸಾಯಕ್ಕೆ ಉತ್ತಮ" ಎಂದು ತಮ್ಮ ಅನುಭವದ ಮಾತನಾಡಿ ಹಳೆ ತಳಿಗಳ ರಕ್ಷಣೆಯ ಉದ್ದೇಶಕ್ಕೆ ಬೆಂಬಲ ನೀಡಿದರು. ಹಲವಾರು ರೈತರು ಹಳೆ ತಳಿಗಳ ಒಳ್ಳೆಯ ಗುಣಗಳನ್ನು ವಿವರಿಸಿ ಚರ್ಚೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದರು.

ಪಾಂಡುರಂಗ ಹೆಗಡೆ ಅವರು ಹಳೆ ತಳಿ ಸಂರಕ್ಷಣೆ ಕುರಿತು ವಿವರಿಸಿದರು. ನಂತರ 'ಅಪ್ಪಿಕೊ' ಅನಂತ ಅವರು ಹಳೆ ತಳಿಗಳಿಗೂ, ಆಧುನಿಕ ತಳಿಗಳಿಗೂ ಇರುವ ಸಾಧಕ-ಭಾದಕದ ಬಗ್ಗೆ ವಿವರಣೆ ನೀಡಿದರು. ನಶಿಸುತ್ತಿರುವ ತಳಿಗಳ ಬಗ್ಗೆ, ಗಿಡಮೂಲಿಕೆಗಳ ಬಗ್ಗೆ ಭಿತ್ತಿ ಚಿತ್ರದ ಪ್ರದರ್ಶನ, ವಿವರಣೆಯನ್ನು ರೈತರಿಗೆ ನೀಡಲಾಯಿತು.

ಡಂಕೆಲ್ ಪ್ರಸ್ತಾವನೆಯ ಬಗ್ಗೆ ಜಿ.ಎಸ್. ಭಟ್ ಉಪ್ಪೋಣಿ ಮಾತನಾಡಿ" ಇದರಿಂದಾಗಿ ಭಾರತವು ಹೊರ ರಾಷ್ಟ್ರಗಳಿಂದ ಆಹಾರವನ್ನು ಆಮದು ಮಾಡಿಕೊಳ್ಳಬೇಕಾಗಿ ಬರುತ್ತದೆ. ಹೀಗಾದರೆ ಭಾರತದಲ್ಲಿ ಕೃಷಿ ವಸ್ತುಗಳ ಬೆಲೆ ಕುಸಿದು ರೈತನ ಹಿತಕ್ಕೆ [illegible] ಧಕ್ಕೆ ಉಂಟಾಗುವದು" ಎಂದು ವಿವರಣೆ ನೀಡಿದರು. ರೈತರಿಗೆ ನೀಡಲಾಗುತ್ತಿರುವ ಅಲ್ಪ ಸಬ್ಸಿಡಿಯನ್ನು ರದ್ದು ಪಡಿಸುವಂತೆ ಈ ಪ್ರಸ್ತಾವನೆ ಒತ್ತಡ ತರಲಿದೆ. ರೈತರಿಗೆ ಹಾನಿ ಉಂಟು ಮಾಡುವ ಈ ಪ್ರಸ್ತಾವನೆಯನ್ನು ಜನರು ವಿರೋಧಿಸುವದು ಅವಶ್ಯ ಎಂಬುದಾಗಿ ಭಟ್ ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಮಾಜಿ ಮಂಡಲ ಪ್ರಧಾನರಾದ ಹಾಲಪ್ಪನವರು ಮಾತನಾಡಿ ನಶಿಸುತ್ತಿರುವ ಭತ್ತದ ವಿಶಿಷ್ಟ ತಳಿಗಳನ್ನು ರಕ್ಷಿಸಲು ಸರಕಾರ ಮುಂದಾಗಬೇಕು ಎಂದು ಹೇಳಿದರು. ಡಂಕೆಲ್ ಪ್ರಸ್ತಾವನೆಯನ್ನು ಕನ್ನಡದಲ್ಲಿ ಅನುವಾದ ಮಾಡಿ ವಿಧಾನ ಸಭೆಯಲ್ಲಿ ಚರ್ಚಿಸಿ ಈ ವಿಚಾರವನ್ನು ಜನರ ಎದುರಿಗೆ ಇಡಬೇಕೆಂದು ಅವರು ಹೇಳಿದರು. ಡಂಕೆಲ್ ಬಗ್ಗೆ ಒಂದು ಸಮಗ್ರವಾದ, ಮುಕ್ತವಾದ, ಚರ್ಚೆಗೆ ಅವಕಾಶವನ್ನು ಮಾಡಿಕೊಡುವದು ಅವಶ್ಯ ಎಂದು ಹಾಲಪ್ಪನವರು ಹೇಳಿದರು.

ಕಾರ್ಯಕ್ರಮದ ಪ್ರಾರಂಭದಲ್ಲಿ ಗುಂದದ ಶಂಕರ ಹೆಗಡೆ ಅವರು ಸತೀಶ ಯಲ್ಲಾಪುರ ಅವರ ಭಿತ್ತಿ ಚಿತ್ರಗಳನ್ನು ಪ್ರದರ್ಶಿಸಿ ವಿವರಣೆ ನೀಡಿದರು. ಬೆಳಲೆಯ ರವಿ ದೇವ ಅವರು ಪ್ರಕೃತಿ ಸಂಸ್ಥೆಯ ಪರವಾಗಿ ಜನರನ್ನು ಸ್ವಾಗತಿಸಿದರು.

—: —: — : — : — : — : — : — : — : —

ಪತ್ರಿಕಾ ಪ್ರಕಟಣೆ,

ದಿನಾಂಕ: 23-4-1993

ಕಾರ್ಯದರ್ಶಿ,
ಪ್ರಕೃತಿ, ಸಿರ್ಸಿ.

ಪ್ರಕೃತಿ
[illegible]
[illegible]
ಶಿರಸಿ-581 401
(ಉತ್ತರ ಕನ್ನಡ)

## ವಿದೇಶ ಪ್ರವಾಸ

ಪರಿಸರ ಸಂರಕ್ಷಣಾ ಕೇಂದ್ರದ ಪಾಂಡುರಂಗ ಹೆಗಡೆ ಅವರು ದಿನಾಂಕ: 1-6-1993 ರಂದು ದಿಲ್ಲಿಯಿಂದ ಯುರೋಪ್ ಪ್ರವಾಸಕ್ಕೆ ತೆರಳಿದ್ದಾರೆ. ಸ್ವೀಡನ್ ದೇಶದ ಜಾನ್‌ಕೋಪಿಂಗ್‌ನಲ್ಲಿ ಅಂತರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಭಾಗವಹಿಸಿ ಅರಣ್ಯ ಸಂರಕ್ಷಣೆಯ ಕುರಿತಾಗಿ ಪ್ರಬಂಧ ಮಂಡಿಸುವರು. ನಂತರ ಅವರು ಡೆನ್ಮಾರ್ಕ್ ಮತ್ತು ಸ್ವಿಟ್ಜರ್ಲೆಂಡ ದೇಶಗಳಿಗೆ ಭೇಟಿ ನೀಡಿ ಅಲ್ಲಿನ ಪರಿಸರ ಕಾರ್ಯಕರ್ತರ ಜೊತೆ ವಿಚಾರ ವಿನಿಮಯ ಮಾಡಿಕೊಳ್ಳಲಿದ್ದಾರೆ. ಒಂದು ತಿಂಗಳ ವಿದೇಶ ಪ್ರವಾಸ ಮುಗಿಸಿ ಜುಲೈ ಎರಡನೆಯ ವಾರದಲ್ಲಿ ಅವರು ಮರಳಿ ಬರುತ್ತಾರೆ.

• • • • • •

ಪತ್ರಿಕಾ ಪ್ರಕಟಣೆ,

ದಿನಾಂಕ: 28-5-1993

ಪರಿಸರ ಸಂರಕ್ಷಣಾ ಕೇಂದ್ರ
ಶಿರಸಿ.

PARIṢARA SANRAKSHANA KENDRA
HULEMALGI BUILDING
SIRSI (Uttara Kannada)
KARNATAKA-581 401

PSK F 2B

# ಪರಿಸರ ಕಲಾ ಶಿಬಿರ

ಪರಿಸರ ಮತ್ತು ಪ್ರಕೃತಿಯ ವಿವಿಧತೆಯ ಕುರಿತಾಗಿ ಆರು ದಿನಗಳ ಕಲಾ ಶಿಬಿರವನ್ನು ಶಿರಸಿಯ ಪರಿಸರ ಸಂರಕ್ಷಣಾ ಕೇಂದ್ರ ಮತ್ತು ಸ್ಪಂದನ ಸಂಸ್ಥೆಗಳು ಸಂಯುಕ್ತವಾಗಿ ಏರ್ಪಡಿಸಿದೆ. ಈ ಕಲಾ ಶಿಬಿರವು ನೀರನಹಳ್ಳಿಯ 'ಸರಾಗ' ದಲ್ಲಿ ನಡೆಯಲಿದೆ. ಅಕ್ಟೋಬರ 25 ರಿಂದ ಆರಂಭವಾಗುವ ಶಿಬಿರವು ಆರು ದಿನಗಳ ಕಾಲ ನಡೆದು 30 ರಂದು ಮುಕ್ತಾಯಗೊಳ್ಳಲಿದೆ.

ರಾಜ್ಯ ಮಟ್ಟದ ಕಲಾಶಾಲೆಗಳಿಂದ 25 ಕಲಾ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಮೈಸೂರು, ಬೆಂಗಳೂರು, ದಾವಣಗೆರೆ, ಹುಬ್ಬಳ್ಳಿ, ಧಾರವಾಡ ಮತ್ತು ಉತ್ತರ ಕನ್ನಡದ ಕಲಾವಿದ್ಯಾರ್ಥಿಗಳು ಈ ಶಿಬಿರದಲ್ಲಿ ಪಾಲ್ಗೊಳ್ಳುವರು. ಈ ಶಿಬಿರವನ್ನು ಶಿರಸಿಯ ಹೆಸರಾಂತ ಕಲಾವಿದರಾದ ಶ್ರೀ ಆರ್.ಜಿ.ರಾಯ್ಕರ ಅವರು ದಿ: 25-10-1993 ರಂದು ಮುಂಜಾನೆ 10 ಗಂಟೆಗೆ ಉದ್ಘಾಟಿಸಲಿದ್ದಾರೆ. ಮುಕ್ತಾಯ ಸಮಾರಂಭದ ಮುಖ್ಯ ಅತಿಥಿಗಳಾಗಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರೊ. ಎಮ್.ಆರ್.ರಘುನಾಥ ಭಟ್ ಅವರು ಭಾಗವಹಿಸಲಿದ್ದಾರೆ.

ಈ ಶಿಬಿರದ ಸಮಯದಲ್ಲಿ ಯುವ ಕಲಾವಿದರು ಹಳ್ಳಿಗಳಲ್ಲಿ ಕಾಲ್ನಡಿಗೆ ಮಾಡಿ ಅರಣ್ಯ ಕೃಷಿಯ ಸಂಬಂಧ ಮತ್ತು ಜನಜೀವನವನ್ನು ಅರಿತುಕೊಳ್ಳಲು ಪ್ರಯತ್ನಿಸುವರು. ಜಿಲ್ಲೆಯ ಗಾಳಿ ಮತ್ತು ಸಿದ್ಧಿ ಜನಾಂಗದ ಜನಜೀವನವನ್ನು ನೋಡಲು ಪ್ರವಾಸ ಕೈಗೊಳ್ಳುವರು. ಈ ಪ್ರವಾಸ ಕಾರ್ಯಕ್ರಮದಡಿಯಲ್ಲಿ ಜಿಲ್ಲೆಯ ಪ್ರಮುಖ ಪರಿಸರ ಚಳುವಳಿಯ ಪ್ರದೇಶವಾದ ಬೇಡ್ತಿ ಪ್ರದೇಶ ಮತ್ತು ಮಾಗೋಡು ಜಲಪಾತವನ್ನು ವೀಕ್ಷಿಸಲಿದ್ದಾರೆ. ಜಿಲ್ಲೆಯ ಈ ಪ್ರಕೃತಿ ವಿವಿಧತೆಯನ್ನು ಎರಡು ದಿನ ವೀಕ್ಷಿಸಿದ ನಂತರ ಎರಡು ದಿನ ಚಿತ್ರಗಳ ರಚನೆಯಲ್ಲಿ ತೊಡಗಿರುತ್ತಾರೆ.

ಕೊನೆಯ ದಿನ, ದಿನಾಂಕ ಅಕ್ಟೋಬರ 30, 1993 ರಂದು ಈ ಚಿತ್ರಗಳ ಪ್ರದರ್ಶನವನ್ನು ನೀರನಹಳ್ಳಿಯ ಸೇವಾ ಸಹಕಾರಿ ಸಂಘದಲ್ಲಿ ಏರ್ಪಡಿಸಲಾಗಿದೆ.

ರಾಜ್ಯದಲ್ಲಿಯೇ ಪ್ರಥಮ ಬಾರಿಗೆ ನಡೆಯಲಿರುವ ಈ ಪರಿಸರ ಕಲಾಶಿಬಿರವು ಯುವ ಕಲಾವಿದರಿಗೆ ಸದವಕಾಶವನ್ನು ಒದಗಿಸಿಕೊಡಲಿದೆ. ಈ ಕಾರ್ಯಕ್ರಮವನ್ನು ಜಿಲ್ಲೆಯ ಕಲಾವಿದರಾದ ಜಿ.ಎಮ್.ತಾರಗೋಡ, ನೀರನಹಳ್ಳಿ ಗಣಪತಿ, ಗ.ಮು.ತುಂಬೇಮನೆ ನಡೆಸಿಕೊಡಲಿದ್ದಾರೆ. ಸತೀಶ ಯಲ್ಲಾಪುರ ಅವರು ಈ ಶಿಬಿರವನ್ನು ಸಂಘಟಿಸುವುದರಲ್ಲಿ ಮಹತ್ವ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ.

ಈ ಕಲಾ ಶಿಬಿರವನ್ನು ಪ್ರಕೃತಿಯ ಮಧ್ಯೆ ಇರುವ ''ಸರಾಗ'' (ನೀರನಹಳ್ಳಿ ರಾಜಾರಾಮ ಹೆಗಡೆ ಅವರ ಮನೆ) ದಲ್ಲಿ ಏರ್ಪಡಿಸಲಾಗಿದ್ದು ಒಂದು ವಿಶಿಷ್ಟತೆಯಾಗಿದೆ.

ರಾಜ್ಯ ಮಟ್ಟದ ಈ ಕಲಾ ಶಿಬಿರದ ಮುಕ್ತಾಯ ಸಮಾರಂಭದಲ್ಲಿ ಪ್ರದರ್ಶಿಸಲಾಗುವ ಚಿತ್ರಗಳನ್ನು ನೋಡಿ ಪ್ರೋತ್ಸಾಹಿಸಬೇಕು.

ooooooooooooo

– ಪತ್ರಿಕಾ ಪ್ರಕಟಣೆ –

ತಾ: 16-10-1993.

ಪರಿಸರ ಸಂರಕ್ಷಣಾ ಕೇಂದ್ರ
ಶಿರಸಿ (ಉತ್ತರ ಕನ್ನಡ)

PSK
F&B

## ಪರಿಸರದ ಕುರಿತು ಪರಿಣಾಮಕಾರಿ ಚಿತ್ರ ಮಾಡಲು ಕರೆ

ನೀರನಹಳ್ಳಿ (ಶಿರಸಿ) 25 : "ಇದು ನಮ್ಮ ರಾಜ್ಯದಲ್ಲೇ ಪ್ರಥಮ ಬಾರಿ ನಡೆಯುತ್ತಿರುವ 'ಪರಿಸರ ಸಂಬಂಧಿತ ಕಲಾ ಶಿಬಿರ'. ನಿಮ್ಮ ಕಲಾಕೃತಿಗಳು ಪರಿಸರ ವೈವಿಧ್ಯತೆಯ ವೈಚಾರಿಕತೆಯಿಂದ ಕೂಡಿರಲಿ. ನಾಡ ವಿಶಿಷ್ಟ ವೈವಿಧ್ಯಮಯ ಪರಿಸರವನ್ನು ಅಲಕ್ಷದಿಂದ ಕಳೆದುಕೊಳ್ಳುತ್ತಿದ್ದೇವೆ. ಎಂಬುದನ್ನು ನಿಮ್ಮ ಕೃತಿಗಳ ಮೂಲಕ ಜನರಿಗೆ ಮನವರಿಕೆ ಮಾಡಿಕೊಡಿ." ಎಂದು ಹಿರಿಯ ಕಲಾವಿದ ಆರ್.ಜಿ. ರಾಯ್ಕರ ಕರೆ ನೀಡಿದ್ದಾರೆ.

ಅವರು ಇಂದು ನೀರ್ನಳ್ಳಿಯಲ್ಲಿ ಪರಿಸರ ಕಲಾ ಶಿಬಿರವನ್ನು ಚಿತ್ರ ರಚನೆಯ ಮೂಲಕ ಉದ್ಘಾಟಿಸಿ ಮಾತನಾಡುತ್ತಿದ್ದರು. ಬಿದಿರು ಗಳಗಳನ್ನೇ ಚಿತ್ರರಚನೆಯ ಸ್ಟ್ಯಾಂಡ್ ಆಗಿಸಿಕೊಂಡು ಅವರು ಪರಿಸರದ ಚಿತ್ರ ಬಿಡಿಸಿ ವಿಶಿಷ್ಟರೀತಿಯಲ್ಲಿ ಕಲಾ ಶಿಬಿರವನ್ನು ಉದ್ಘಾಟಿಸಿದರು. ರಾಜಾರಾಮ ಹೆಗಡೆ ಅವರ ಮನೆ 'ಸರಾಗ' ದ ಅಂಗಳದಲ್ಲಿನ ಹಸಿರು ಮರಗಳ ಕೆಳಗಡೆ, ತಂಪಿನಲ್ಲಿ ಪ್ರಕೃತಿಯ ಮಧ್ಯ ಈ ಕಾರ್ಯಕ್ರಮ ನಡೆಯಿತು.

"ಸ್ಪಂದನ ಹಾಗೂ ಪರಿಸರ ಸಂರಕ್ಷಣ ಕೇಂದ್ರ ಶಿರಸಿ ಹಮ್ಮಿಕೊಂಡಿರುವ ಈ ಕಾರ್ಯ ಅಭಿನಂದನೀಯ. ಇದು ಇನ್ನಿತರ ಪರಿಸರ ಸಂಘಟನೆಗಳು ಅನುಸರಿಸುವಂಥದ್ದು" ಎಂದೂ ನುಡಿದರು.

ಕಾರ್ಯಕ್ರಮದ ಅತಿಥಿಗಳಾಗಿ ಪ್ರಸಿದ್ಧ ಕಲಾವಿದ ಜಿ.ಎಮ್.ಹೆಗಡೆ,ತಾರಗೋಡ ಮಾತನಾಡಿ ಪರಿಸರವೇ ಒಂದು ಕಲಾ ಶಿಬಿರವಿದ್ದ ಹಾಗೆ. ನಾವಿಲ್ಲಿ ಕಲಾವಿದ ವಿದ್ಯಾರ್ಥಿಗಳಾಗಿ ಪರಿಸರವನ್ನು ಅಭ್ಯಸಿಸುವ ಎಂದರು.

ವೇದಿಕೆಯಲ್ಲಿ ಶಿಬಿರದ ಅತಿಥೇಯರೂ, ಕಲಾವಿದರೂ ಆದ ನೀರ್ನಳ್ಳಿ ರಾಜಾರಾಮ ಹೆಗಡೆ ಉಪಸ್ಥಿತರಿದ್ದರು.

ಅಧ್ಯಕ್ಷ ಸ್ಥಾನದಿಂದ ಪ್ರಸಿದ್ಧ ಕಲಾವಿದ ನೀರ್ನಳ್ಳಿ ಗಣಪತಿ ಮಾತನಾಡಿ — ನಮ್ಮ ಕೃಷಿ ಪ್ರಧಾನ ದೇಶ. ಪರಿಸರವನ್ನು ಅವಲಂಬಿಸಿದ್ದ ಕೃಷಿ ಇಂದು ಎತ್ತ ಸಾಗಿದೆ. ನಮ್ಮ ಕೃಷಿಕ ತಂದುಕೊಂಡಿರುವ ಆಪತ್ತು ಎಂಥದ್ದು ಎಂಬುದನ್ನು ನಾವು ಈ ಶಿಬಿರದಲ್ಲಿ ಅಧ್ಯಯನ ನಡೆಸಿ ಕಲಾಕೃತಿಯ ಮೂಲಕ ಪ್ರತಿಬಿಂಬಿಸಬೇಕಿದೆ ಎಂದರು.

ಪ್ರಾರಂಭದಲ್ಲಿ ಅಪ್ಪಿಕೋ ನೇತಾರ ಪಾಂಡುರಂಗ ಹೆಗಡೆ ಸ್ವಾಗತಿಸಿದರು. ಕಲಾವಿದ ಸತೀಶ ಯಲ್ಲಾಪುರ ಪರಿಚಯಿಸಿದರು. ಕೊನೆಯಲ್ಲಿ ಪ್ರಕಾಶ ಭಟ್ಟ,ಬಕ್ಕಳ ವಂದಿಸಿದರು.

ಈ ಕಾರ್ಯಕ್ರಮದಲ್ಲಿ ಮೈಸೂರು, ಬೆಂಗಳೂರು, ದಾವಣಗೆರೆ, ಹುಬ್ಬಳ್ಳಿ ಮತ್ತು ಧಾರವಾಡದ ಕಲಾ ಶಾಲೆಗಳಿಂದ 25 ಕಲಾ ವಿದ್ಯಾರ್ಥಿಗಳು ಭಾಗವಹಿಸುತ್ತಿದ್ದಾರೆ. ಪರಿಸರದ ಕುರಿತಾಗಿ ಚಿತ್ರ ರಚಿಸಲು ಗ.ಮ.ತುಂಬೆಮನೆ, ಜಿ.ಎಮ್.ತಾರಗೋಡ, ನೀರ್ನಳ್ಳಿ ಗಣಪತಿ ಮತ್ತು ಸತೀಶ ಯಲ್ಲಾಪುರ ಸಹಾಯಕರಾಗಿ ಕಾರ್ಯಕ್ರಮವನ್ನು ನಡೆಸಿಕೊಡುತ್ತಿದ್ದಾರೆ.

ನಾಳೆ ಅರಣ್ಯ ಮತ್ತು ಕೃಷಿಯ ವಿವಿಧತೆಯನ್ನು ಅರಿಯಲು ಶಿಬಿರಾರ್ಥಿಗಳು ನೀರ್ನಹಳ್ಳಿಯಿಂದ ಕವಲಗದ್ದೆ, ಕೊಪ್ಪ ಮಾರ್ಗವಾಗಿ ಗುಬ್ಬಗದ್ದೆಗೆ ಪಾದಯಾತ್ರೆ ಮಾಡುವರು.

. . . . . . . .

: ಪತ್ರಿಕಾ ಪ್ರಕಟನೆ :-  25-10-1993

ಪಾಂಡುರಂಗ ಹೆಗಡೆ

ಪರಿಸರ ಸಂರಕ್ಷಣಾ ಕೇಂದ್ರ
ಹುಲೇಮಳಗಿ ಕಟ್ಟಡ
ಶಿರಸಿ (ಉ. ಕನ್ನಡ) ೫೮೧ ೪೦೧

ಪರಿಸರ ಸಂರಕ್ಷಣಾ ಕೇಂದ್ರ
ಶಿರಸಿ.

PSK
F2 13

## ಕೊಡಸಳ್ಳಿ ಚಳುವಳಿಗೆ ಬೆಂಬಲ

ಕೊಡಸಳ್ಳಿಯಲ್ಲಿ ನಿರ್ಮಾಣವಾಗುತ್ತಲಿರುವ ಆಣೆಕಟ್ಟಿನ ವಿರುದ್ಧ ಶಾಂತಿಯುತ ಚಳುವಳಿ ನಡೆಸುತ್ತಿರುವ ಜನರನ್ನು ಬಂಧಿಸಿ ಅವರನ್ನು ಜೈಲಿನಲ್ಲಿಟ್ಟಿರುವದನ್ನು ಪರಿಸರ ಸಂರಕ್ಷಣಾ ಕೇಂದ್ರ ತೀವ್ರವಾಗಿ ಖಂಡಿಸುತ್ತದೆ. ನಿರಾಶ್ರಿತರಾಗುವ ಜನತೆ ಪರಿಹಾರ ಹಣವನ್ನು ಕೇಳಿದ್ದಕ್ಕಾಗಿ ಸರಕಾರಿ ಅಧಿಕಾರಿಗಳು ಈ ಕ್ರಮವನ್ನು ಕೈಗೊಂಡಿರುವದು ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ. ಇದರ ಜೊತೆಗೆ ಚಳುವಳಿಗಾರರ ಮೇಲೆ ಪ್ರಮಾಣವಿಲ್ಲದ ಪೊಳ್ಳು ಕ್ರಿಮಿನಲ್ ಮೊಕದ್ದಮೆ ಹಾಕಿರುವದು ಸರಕಾರದ ಕ್ರೂರ ನೀತಿಯ ಸೂಚಕವಾಗಿದೆ. ನಾಡಿನ ಮನೆಗಳಿಗೆ ಬೆಳಕನ್ನು ನೀಡಲು ತಮ್ಮ ಸರ್ವಸ್ವವನ್ನೇ ತ್ಯಾಗಮಾಡುವ ಈ ಚಳುವಳಿಗಾರರಿಗೆ ರಾಜ್ಯ ಸರಕಾರ ನೀಡುವ ಗೌರವ ಇದಾಗಿದೆಯೆ ?

ಬಂಧಿಸಲಾಗಿರುವ ಚಳುವಳಿಗಾರರು ಯಾವ ತಪ್ಪನ್ನು ಮಾಡಿಲ್ಲವಾದುದರಿಂದ ಅವರು ಜಾಮೀನಿನ ಮೇಲೆ ಬಿಡುಗಡೆ ಹೊಂದಲು ನಿರಾಕರಿಸಿರುವದು ಸ್ವಾಗತಾರ್ಹ. ಸರಕಾರದ ಕ್ರಮ ತಪ್ಪಾಗಿರುವದರಿಂದ ಬಂಧಿಸಿದ 300 ಜನರನ್ನು ಬೇಶರತ್ತಾಗಿ ಕೂಡಲೆ ಬಿಡುಗಡೆ ಮಾಡಬೇಕು. ಈ ಕುರಿತು ಜಿಲ್ಲಾಧಿಕಾರಿಗಳಿಗೆ ತಂತಿ ಸಂದೇಶವನ್ನು ಕಳುಹಿಸಲಾಗಿದೆ.

ಬಂಧಿಸಿದವರಲ್ಲಿ 75 ಜನ ಮಹಿಳೆಯರೂ ಸೇರಿದ್ದಾರೆ. ಇವರಿಗೆ ಜೈಲಿನಲ್ಲಿ ಸರಿಯಾದ ಊಟ-ತಿಂಡಿ ವ್ಯವಸ್ಥೆ ಮಾಡದ ಸರಕಾರದ ಕ್ರಮ ಖಂಡನೀಯವಾದದ್ದು. ಇದಲ್ಲದೆ ಚಳುವಳಿಗಾರರನ್ನು, ಆರೋಗ್ಯ ಸರಿ ಇಲ್ಲದವರನ್ನು ಸಹ ಬೇಡಿ ಹಾಕಿ ಕರೆದೊಯ್ಯುವದು ಬ್ರಿಟೀಶರ ದಬ್ಬಾಳಿಕೆಗೂ ಮೀರಿದ ಕೃತ್ಯವಾಗಿದೆ. ರಾಜ್ಯದಲ್ಲಿ ಸರಕಾರವಿಲ್ಲವೆ ? ನಮ್ಮ ಜಿಲ್ಲೆಯನ್ನು ನಡೆಸುತ್ತಿರುವ ಅಧಿಕಾರಿ ವರ್ಗದವರು ಜನಹಿತವನ್ನು ಮರೆತು ಜನವಿರೋಧಿ ಕ್ರಮವನ್ನು ಮುಂದುವರಿಸಿದರೆ ಉತ್ತರ ಕನ್ನಡದ ಜನತೆ ಉಗ್ರ ಹೋರಾಟಕ್ಕೆ ಅಣಿಯಾಗಬೇಕಾಗುತ್ತದೆ.

ಕೊಡಸಳ್ಳಿ ಹೋರಾಟಗಾರರಿಗೆ ಸ್ಪಂದಿಸಿ ಜಿಲ್ಲೆಯ ಎಲ್ಲ ರಾಜಕೀಯ ಪಕ್ಷಗಳೂ ಒಂದಾಗಿ ಬಂಧಿಸಿದ ಎಲ್ಲ ಜನರನ್ನು ಬೇಶರತ್ತಾಗಿ ಬಿಡುಗಡೆ ಮಾಡುವಂತೆ ಸಂಘಟಿತರಾಗಬೇಕಾಗಿದೆ.

⊙ ⊙ ⊙ ⊙ ⊙ ⊙

ಪತ್ರಿಕಾ ಪ್ರಕಟನೆ

ದಿ : 24-11-1993

ಪರಿಸರ ಸಂರಕ್ಷಣಾ ಕೇಂದ್ರ
ಶಿರಸಿ 581 401.

ಪರಿಸರ ಸಂರಕ್ಷಣಾ ಕೇಂದ್ರ
ಹುಲೇಮಳಗಿ ಕಟ್ಟಡ
ಶಿರಸಿ (ಉ. ಕನ್ನಡ) ೫೮೧ ೪೦೧

# ತುಂಗಾ ಮೂಲ ಉಳಿಸಿ ಹೋರಾಟ ಒಕ್ಕೂಟ.

**ತುಂಗಾ ತೀರದ ಜನತೆಯ ಸಮಾವೇಶ** ಸೆಪ್ಟೆಂಬರ್. 26-27, 1994.

ಸಮಾವೇಶದ [illegible]ಯಗಳು:—

* ತುಂಗಾ ಹಾಗೂ ಭದ್ರಾ ನದಿಗಳ ಜಲಮೂಲಕ್ಕೆ ಅಪಾಯವನ್ನುಂಟು ಮಾಡುವ ಕುದುರೆಮುಖ ರಾಷ್ಟ್ರೀಯ ಅಭಯಾರಣ್ಯದ ಸಸ್ಯ ಹಾಗೂ ಜೀವ ಸಂಕುಲಗಳಿಗೆ ವಿನಾಶಕಾರಿಯಾದ ಈ ನದಿ ಪಾತ್ರದ ಜನರ ಆರ್ಥಿಕ ಹಾಗೂ ಪರಿಸರ ಪರಿಸ್ಥಿತಿಯ ಮೇಲೆ ದುಷ್ಪರಿಣಾಮವನ್ನುಂಟು ಮಾಡುವ ಗಂಗಡಿಕಲ್ಲು ಗುಡ್ಡ ಹಾಗೂ ನೆಲ್ಲಿಬೀಡಿನ ಕಬ್ಬಿಣ ಅದಿರು ಯೋಜನೆಯನ್ನು ಕೈಬಿಡಬೇಕೆಂದು ತುಂಗಾ ತೀರದ ಜನತೆಯ ಸಮಾವೇಶವು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳನ್ನು ಆಗ್ರಹಪಡಿಸುತ್ತದೆ.

* ಜೀವನದಿಗಳಾದ ತುಂಗ-ಭದ್ರ ಹಾಗೂ ಅವುಗಳ ಉಪನದಿಗಳ ಅಸ್ತಿತ್ವಕ್ಕೆ ಧಕ್ಕೆಯನ್ನುಂಟು ಮಾಡುವ ಈ ಪ್ರಾಂತ್ಯದ ಜನರ ಜನಜೀವನದ ಮೇಲೆ ಹಾಗೂ ಪರಿಸರ ಸಮತೋಲನದ ಮೇಲೆ ಅಡ್ಡ ಪರಿಣಾಮ ಬೀರುವ ಯಾವುದೇ ಯೋಜನೆಗಳನ್ನು ಯಾವುದೇ ಸಂಸ್ಥೆ ಕೈಗೊಂಡರೂ ಅದನ್ನು ಜಾರಿಗೊಳ್ಳಲು ಬಿಡುವುದಿಲ್ಲವೆಂದು ಸಭೆ ನಿರ್ಣಯಿಸುತ್ತದೆ. ಇಂತಹ ಜನವಿರೋಧಿ ಯೋಜನೆಗಳನ್ನು, ಸ್ಥಳೀಯ ಜನರ ಅಭಿಪ್ರಾಯದ ವಿರುದ್ಧ ಕೈಗೊಳ್ಳುವ ಅಪ್ರಜಾತಾಂತ್ರಿಕ ವರ್ತನೆಗಳನ್ನು ಸರ್ಕಾರ ನಿಲ್ಲಿಸಬೇಕೆಂದು ಸಭೆಯು ಒತ್ತಾಯಿಸುತ್ತದೆ.

* ಜನರ ಸಾಂಸ್ಕೃತಿಕ ಹಾಗೂ ನೈತಿಕ ಜೀವನದ ಮೇಲೆ ಕೆಟ್ಟ ಪರಿಣಾಮಗಳನ್ನುಂಟು ಮಾಡುವುದಲ್ಲದೇ ಪರಿಸರ ನೈರ್ಮಲ್ಯಕ್ಕೂ ಆತಂಕ ತಂದೊಡ್ಡುವ ಪ್ರವಾಸೋದ್ಯಮ ಅಭಿವೃದ್ಧಿ ಯೋಜನೆಗಳಿಗೆ ಸರ್ಕಾರ ಪರವಾನಿಗೆ ನೀಡುವುದನ್ನು ಸಭೆಯು ತೀವ್ರವಾಗಿ ಖಂಡಿಸುತ್ತದೆ. ಅಲ್ಲದೇ ಶೃಂಗೇರಿಯ ಬಳಿ ಹೆಗ್ಗಾನ್ ವ್ಯಾಲಿ ರಿಸಾರ್ಟ್ಸ್‌ಗೆ ನೀಡಿರುವ ಪರವಾನಿಗೆಯನ್ನು ಕೂಡಲೇ ರದ್ದುಗೊಳಿಸಬೇಕೆಂದು ಸಭೆಯು ಒತ್ತಾಯಿಸುತ್ತದೆ. ತುಂಗಾ ಮತ್ತು ಭದ್ರಾ ನದಿಗಳಲ್ಲಿ ತಮ್ಮ ವಿಷಯುಕ್ತ ತ್ಯಾಜ್ಯಗಳ ಮೂಲಕ ಮಾಲಿನ್ಯವನ್ನುಂಟು ಮಾಡಿ ನದಿ ಪಾತ್ರದ ಜನರ - ಜಾನುವಾರುಗಳ ಆರೋಗ್ಯವನ್ನು ನಾಶಗೊಳಿಸುತ್ತಿರುವ 'ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಮೈಸೂರು ಕಾಗದ ಕಾರ್ಖಾನೆ, ಹರಿಹರ ಪಾಲಿಫೈಬರ್ಸ್, ದೇವಿ ಶುಗರ್ಸ್ (ತುಂಗಭದ್ರ ಸಕ್ಕರೆ ಕಾರ್ಖಾನೆ) ನಂತಹ ಕಾರ್ಖಾನೆಗಳ ವಿರುದ್ಧ ಸರ್ಕಾರ ಶಿಸ್ತಿನ ಕ್ರಮಗಳನ್ನು ಕೈಗೊಳ್ಳಬೇಕು. ಕಾರ್ಖಾನೆಗಳನ್ನು ಮುಚ್ಚಿದ ಸಂದರ್ಭದಲ್ಲಿ ಕಾರ್ಮಿಕರಿಗೆ ಪರ್ಯಾಯ ಉದ್ಯೋಗ ವ್ಯವಸ್ಥೆಯನ್ನು ಮಾಡಬೇಕು. ಪಶ್ಚಿಮ ಘಟ್ಟಗಳ ಉಳಿವಿಗೆ ಮಾರಕವಾಗಿರುವ ಶರಾವತಿ ಟೇಲ್‌ರೇಸ್ ಯೋಜನೆ, ಮಂಗಳೂರಿನ ತಾಮ್ರ ಸಂಸ್ಕರಣಾ ಘಟಕ (ಪಣಂಬೂರು). (Copper Smelting Unit), ಅಣುವಿಕಿರಣದ ಅಪಾಯವನ್ನು ತಂದಿಟ್ಟಿರುವ ಕೈಗಾ ಅಣುಸ್ಥಾವರ ಹಾಗೂ ಸ್ಥಳೀಯ ಜನರ ಕೃಷಿ ಹಾಗೂ ಆರೋಗ್ಯಕ್ಕೆ ಮಾರಕವಾಗಿರುವ ಬೀದರದ ರಾಸಾಯನಿಕ ಕಾರ್ಖಾನೆಗಳನ್ನು ಈ ತಕ್ಷಣವೇ ರದ್ದುಪಡಿಸಿ ಸರ್ಕಾರ ಆಜ್ಞೆ ಹೊರಡಿಸಬೇಕೆಂದು ಸಭೆ ಒತ್ತಾಯಿಸುತ್ತದೆ. ಭಾರತದ ಪರಿಸರ ಸಮತೋಲನದ ಮೇಲೆ, ಆದಿವಾಸಿ
ಜನರ ಬದುಕಿನ ಮೇಲೆ ಆತಂಕಕಾರಿ ಪರಿಣಾಮಗಳನ್ನು ಬೀರಲಿರುವ ನರ್ಮದಾ [illegible]
1.) ಯೋಜನೆಯನ್ನು ಮತ್ತು ತೆಹರಿ ಯೋಜನೆಯನ್ನು ರದ್ದುಗೊಳಿಸುವಂತೆ ಕೇಂದ್ರ ಸರ್ಕಾರವನ್ನು
ಸಭೆ ಒತ್ತಾಯ ಪಡಿಸುತ್ತದೆ.

* ಸರ್ಕಾರದ ಉದಾರ ಆರ್ಥಿಕ ನೀತಿ ಹಾಗೂ ಗ್ಯಾಟ್ ಒಪ್ಪಂದಗಳಿಂದಾಗಿ ಬಹುರಾಷ್ಟ್ರೀಯ ಕಂಪನಿಗಳ ವಿದೇಶಿ ಬಂಡವಾಳವು ಮುಕ್ತವಾಗಿ ಹರಿದು ಬರುತ್ತಿರುವುದು ಇಲ್ಲಿನ ಸಂಪನ್ಮೂಲಗಳ ಲೂಟಿಗೆ, ಪರಿಸರ ವಿನಾಶಕ್ಕೆ ಪ್ರಮುಖ ಅಪಾಯವಾಗಿದ್ದು ಈ ಜನ ವಿರೋಧಿ ನೀತಿಯಿಂದ ಭಾರತದ ಜನ ಸಾಮಾನ್ಯರ ಬದುಕು ದಿವಾಳಿ ಏಳುವಂತಾಗಿದೆ. ಸಾಮ್ರಾಜ್ಯಶಾಹಿಗಳಿಗೆ ದೇಶದ ಸ್ವಾವಲಂಬನೆಯನ್ನು ಅಡವಿಡುವಂತಹ ಸರ್ಕಾರದ ಜನದ್ರೋಹಿ ನೀತಿಯನ್ನು ಈ ಸಭೆ ತೀವ್ರವಾಗಿ ಖಂಡಿಸುತ್ತದೆ.

* ಗಂಗಡಿಕಲ್ಲು ಗುಡ್ಡದ ಅದಿರು ಯೋಜನೆಯನ್ನು, ಪಶ್ಚಿಮ ಘಟ್ಟಗಳ ಲೂಟಿಗೆ ಮಾರಕವಾಗುವ ಯೋಜನೆಗಳನ್ನು ಮಲೆನಾಡಿನ ಜನರ ಆರ್ಥಿಕ, ಪರಿಸರ ಹಾಗೂ ಸಾಂಸ್ಕೃತಿಕ ಬದುಕಿಗೆ ವಿನಾಶಕಾರಿಯಾಗಿರುವ ಯೋಜನೆಗಳನ್ನು ವಿರೋಧಿಸುವ ಖಚಿತ ಪ್ರಣಾಳಿಕೆಯನ್ನು ಪ್ರಕಟಿಸದೇ ಇರುವ ಯಾವುದೇ ರಾಜಕೀಯ ಪಕ್ಷದ ಅಭ್ಯರ್ಥಿಗೂ ಮುಂಬರುವ ಚುನಾವಣೆಯಲ್ಲಿ, ಚುನಾವಣಾ ಪ್ರಚಾರಕ್ಕೆ ಅವಕಾಶ ಮಾಡಿಕೊಡುವುದಿಲ್ಲವೆಂದು ಸಭೆ ನಿರ್ಣಯಿಸುತ್ತದೆ. ಈ ಯೋಜನೆಗಳ ವಿರುದ್ಧ ಜನರೊಂದಿಗೆ ನಿಲ್ಲದ ಎಲ್ಲಾ ರಾಜಕೀಯ ಪಕ್ಷಗಳನ್ನು ಬಹಿಷ್ಕರಿಸಬೇಕೆಂದು ಒಕ್ಕೂಟವು ಜನರಿಗೆ ಕರೆ ಕೊಡುತ್ತದೆ.

---

[illegible]

01376-814441

Riverview Hotel

01376-814566

Pradeep

after 10 PM

A N Nagaraj
Bheemankatte
Po [illegible]
Tirthahalli

ಪರಿಸರ ಸಂರಕ್ಷಣಾ ಕೇಂದ್ರ

ಹುಲೇಮಳಗಿ ಕಟ್ಟಡ
ಶಿರಸಿ-581 401, ಉತ್ತರ ಕನ್ನಡ

<u>ಹುಲೇಕಲನಲ್ಲಿ ಕೈಗಾ ಪಾವರಲಾಯಿನ್ ವಿರೋಧಿಸಿ ಚಳುವಳಿ</u>

ಮಾನ್ಯರೇ,

ನಾವೆಲ್ಲ ಈ ಹಿಂದೆ ಕೈಗಾ ಯೋಜನಾ ಸ್ಥಳದಲ್ಲಿ ಹೋಗಿ ಹೋರಾಟ ನಡೆಸಿದ್ದೇವೆ. ಈಗ ಕೈಗಾದಿಂದ ಸಿರ್ಸಿಯವರೆಗಿನ 58 ಕಿ. ಮಿ. ಉದ್ದ ವಿರುವ ವಿದ್ಯುತ್ ಲಾಯಿನ್ ಅನ್ನು ( 400 KW ) ಎಳೆಯುವ ಕಾರ್ಯ ದಿನಾಂಕ 29-12-94 ರಿಂದ ಹುಲೇಕಲದಿಂದ ಆರಂಭವಾಗಲಿದೆ.

ಕೈಗಾವನ್ನೇ ವಿರೋಧಿಸಿದ ಜನತೆ ಈ ಲಾಯಿನಅನ್ನು ಸ್ಥಾಪಿಸುವ ಕಾರ್ಯವನ್ನು ಸ್ಥಗಿತಗೊಳಿಸುವದು ಅನಿವಾರ್ಯವಾಗಿದೆ. ಆದುದರಿಂದ ದಿನಾಂಕ 29 ರಂದು ಮುಂಜಾನೆ 9 ಘಂಟೆಗೆ ಜನರು ಸಂಘಟಿತರಾಗಿ ಹುಲೇಕಲನಲ್ಲಿ ಬಂದು ತಮ್ಮ ವಿರೋಧವನ್ನು ವ್ಯಕ್ತಪಡಿಸಬೇಕೆಂದು ನಿರ್ಣಯಿಸಲಾಗಿದೆ. (ಹುಲೇಕಲ್ – ವಾನಳ್ಳಿ ರಸ್ತೆಯಲ್ಲಿ ) [illegible]

ಶಾಂತಿಯುತವಾಗಿ ನಡೆಯಲಿರುವ ಈ ಸಭೆಯಲ್ಲಿ ಹೆಚ್ಚಿನ ಜನತೆ ಭಾಗವಹಿಸಿ ನಮ್ಮ ವಿಚಾರವನ್ನು ವ್ಯಕ್ತಪಡಿಸುವದು ಅವಶ್ಯವಾಗಿದೆ. ಈ ಹಿಂದೆ ನೂರಾರು ಕಿ. ಮಿ. ದೂರ ಪ್ರಯಾಣ ಮಾಡಿ ಕೈಗಾ ಹೋರಾಟ ಮಾಡಬೇಕಾಗಿತ್ತು. ಈಗ ನಮ್ಮ ಹತ್ತಿರವೇ ಕೈಗಾದ ಕೆಲಸ ಆರಂಭವಾಗಿದ್ದುರಿಂದ ಪ್ರತಿಭಟನೆಗೆ ಅನುಕೂಲ ವಾತಾವರಣವಿದೆ. ಆದುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಜನರು ಬಂದು ನಮ್ಮ ಮುಂದಿನ ಪೀಳಿಗೆಯ ರಕ್ಷಣೆಗೆ ಮುಂದಾಗಬೇಕೆಂದು ಕರೆ ನೀಡುತ್ತಿದ್ದೇವೆ.

ಈ ಕುರಿತು ಹೆಚ್ಚಿನ ಮಾಹಿತಿ ಬೇಕಾದಲ್ಲಿ ಈ ಕೆಳಗೆ ಸಂಪರ್ಕಿಸಿ.

ಕೆರಪ್ಪಳ ಬಾಳ,
ದೇವಿಕೆರೆ, ಸಿರಸಿ.

ಈ ಹೋರಾಟದಲ್ಲಿ ಭಾಗವಹಿಸುವಂತೆ ಎಲ್ಲ ರಾಜಕೀಯ ಪಕ್ಷಗಳ ಜನರಿಗೆ ಕರೆ ನೀಡುತ್ತಿದ್ದೇವೆ. ಜನರ ಹಿತರಕ್ಷಣೆಯ ಜವಾಬ್ದಾರಿಯನ್ನು ಹೊತ್ತಿರುವ ಹೊಸ ವಿಧಾನಸಭಾ ಸದಸ್ಯರೂ ಸಹ ಪಾಲುಗೊಳ್ಳುವರೆಂದು ನಮ್ಮ ಆಶಯ.

ಪಾಂಡುರಂಗ ಹೆಗಡೆ

ಪತ್ರಿಕಾ ಪ್ರಕಟನೆ ದಿ. 20-12-1994

ಗೆ:
ಸಂಪಾದಕರಿಗೆ
ಮುನ್ನಡೆ
ಶಿರಸಿ

ಪರಿಸರ ಸಂರಕ್ಷಣಾ ಕೇಂದ್ರ, ಶಿರಸಿ.

PSK F2B

## ಯಾಣ ಉಳಿಸಿ

ಇತ್ತೀಚಿನ ದಿನಗಳಲ್ಲಿ ಉತ್ತರ ಕನ್ನಡ ಪ್ರಸಿದ್ಧ ಕ್ಷೇತ್ರವಾದ ಯಾಣವನ್ನು ನೋಡಲು ಸಾವಿರಾರು ಪ್ರವಾಸಿಗರು ಬರುತ್ತಿದ್ದಾರೆ. ರಮಣೀಯ ತಾಣವಾದ ಯಾಣವನ್ನು ವೀಕ್ಷಿಸಲು ಬರುತ್ತಿರುವದು ಸಂತೋಷದ ಸಂಗತಿ. ಪ್ರಕೃತಿಯ ಮಡಿಲಲ್ಲಿರುವ ಯಾಣವನ್ನು ನೋಡಿದ ನಂತರ ಆ ಸ್ಥಳದಲ್ಲಿ ತಮ್ಮ ಕುರುಹನ್ನು ಬಿಟ್ಟು ಹೋಗುತ್ತಿರುವುದರಿಂದ ಯಾಣ ಇಂದು ಕಸದ ಕೊಂಪೆ ಆಗಿದೆ. ಪ್ರವಾಸಿಗರು ಬಿಸಾಡಿದ ಕಸ ಯಾಣದ ಪವಿತ್ರತೆಗೆ ಕಳಂಕವಾಗಿದೆ.

ಯಾಣವನ್ನು ನಾವು ಉಳಿಸಿಕೊಂಡು ಹೋಗಲು ಈ ಕೆಳಗಿನ ಕೆಲಸವನ್ನು ನಾವು ಮಾಡುವುದು ಅನಿವಾರ್ಯವಾಗಿದೆ.

– ಪ್ರವಾಸಿಗರು ತಾವು ತಂದಿರುವ ಬಿಸ್ಕತ್ತು, ಚಾಕಲೇಟ, ಮತ್ತು ಇತರ ಕಾಗದದ ಕಸವನ್ನು ರಸ್ತೆ ಬದಿಯಲ್ಲಿ ಅಥವಾ ಯಾಣದ ಪರಿಸರದ ಮಧ್ಯೆ ದಯವಿಟ್ಟು ಬಿಸಾಡಬೇಡಿ.

• ಈ ಕಸವನ್ನು ನೀವು ಮರಳಿ ಒಯ್ಯುವುದೇ ಯಾಣದ ಪ್ರಕೃತಿಗೆ ನೀವು ಮಾಡಬಹುದಾದ ಅಳಿಲು ಸೇವೆ.

– ನಿಮಗೆ ಮರಳಿ ಒಯ್ಯಲು ಸಾಧ್ಯವಿಲ್ಲವಾದರೆ ಅದನ್ನು ಕಸದ ಡಬ್ಬಿಯಲ್ಲಿಯೇ ಹಾಕಿ. ಇಲ್ಲವೇ ಒಂದೆಡೆಗೆ ಶೇಖರಿಸಿ ಇಡಿ.

• ಯಾತ್ರಿಕರು ತೆಗೆದುಕೊಂಡು ಬಂದ ಪ್ಲಾಸ್ಟಿಕ ಚೀಲವನ್ನು ಬೀಸಾಡಬೇಡಿ. ಮಣ್ಣಿನ ಜೊತೆ ಕರಗದೇ ಇರುವುದರಿಂದ ಹಲವಾರು ವರ್ಷ ಹಾಗೆಯೇ ಇರುತ್ತದೆ. ನಿಮ್ಮ ನಂತರ ಬಂದವರಿಗೆ ಈ ಪ್ಲಾಸ್ಟಿಕ ಕಾಗದಗಳು ಹೇಸಿಗೆ ಹುಟ್ಟಿಸುತ್ತದೆ.

– ದಯವಿಟ್ಟು ಪ್ಲಾಸ್ಟಿಕ ಕೊಟ್ಟೆ, ಗುಟಕಾ ಕೊಟ್ಟೆ, ಚಾಕಲೇಟ ಕಾಗದವನ್ನು ನೀವು ಮರಳಿ ಒಯ್ಯುವುದು ಯಾಣದ ಆರೋಗ್ಯ ದೃಷ್ಟಿಯಿಂದ ಉತ್ತಮ.

• ಪ್ರಕೃತಿಯ ಮಡಿಲಲ್ಲಿ ನೀವಿರುವಾಗ ಮಧ್ಯಪಾನದ ಅಮಲಿನ ಅವಶ್ಯಕತೆ ಇದೆಯೇ? ಮದ್ಯಪಾನಕ್ಕಿಂತ ನಿಸರ್ಗದ ಸವಿಯನ್ನು ಆನಂದಿಸುವುದನ್ನು ಕಲಿಯುವುದು ಉತ್ತಮ.

– ಮದ್ಯಪಾನ ಮಾಡಬೇಡಿರೆಂದು ಕಳಕಳಿಯ ವಿನಂತಿ. ಇದರಿಂದ ಯಾಣದ ಪಾವಿತ್ರ್ಯಕ್ಕೆ ಧಕ್ಕೆ ಬರುತ್ತದೆ. ಇನ್ನು ನೀವು ಮದ್ಯದ ಬಾಟಲಿ ತಂದಿರುವದಾದರೆ ಅದನ್ನು ಮರಳಿ ಒಯ್ಯುವುದು ಉತ್ತಮ.

• ಯಾಣ ರಮಣೀಯತೆಯನ್ನು, ಹಕ್ಕಿ ಪಕ್ಷಿಗಳ ನಾದವನ್ನು ಸವಿಯಲು ಶಾಂತವಾಗಿರಬೇಕಾದ್ದು ಅತಿ ಅವಶ್ಯ. ಗದ್ದಲ ಮಾಡುವುದು, ಕೂಗಾಟ, ಯಾವುದೊಂದು ಸಿನೇಮಾದಲ್ಲಿ ಇದೆ ಎಂಬಂತೆ ಪ್ರತಿಧ್ವನಿಗಾಗಿ ಕೇಕೆ, ಕೂಗು ಹಾಕುವುದು ನೀವು ಪ್ರಕೃತಿ ಮಾತೆಗೆ ಅಪಮಾನ ಮಾಡಿದಂತೆ.

– ಯಾಣದ ರುದ್ರ ರಮಣೀಯತೆಯನ್ನು ಕಾಪಾಡಲು ನೀವು ಶಾಂತತೆಯನ್ನು ಪಾಲಿಸುವುದು ಅವಶ್ಯ. ನೀವು ತಂದ ಟೇಪರಿಕಾರ್ಡರ ಬದಲಿಗೆ ಪ್ರಕೃತಿಯ ಗೀತೆಯನ್ನು ಕೇಳಲು ಪ್ರಯತ್ನಿಸಿ.

• ಮುಂಬರುವ ಶಿವರಾತ್ರಿಯ ದಿನ ಸಾವಿರಾರು ಯಾತ್ರಿಕರು ಯಾಣಕ್ಕೆ ಭೈರವೇಶ್ವರನ ದರ್ಶನಕ್ಕಾಗಿ ಬರುತ್ತಾರೆ. ಅವರು ಈ ಮೇಲಿನ ನಿವೇದನೆಯನ್ನು ಪಾಲಿಸಿದರೆ ಮಾತ್ರ ಯಾಣವನ್ನು ಉಳಿಸಲು ಸಾಧ್ಯ.

ಬನ್ನಿ ಯಾಣದ ಪ್ರಕೃತಿಯನ್ನು ನಾವೆಲ್ಲ ಕಾಪಾಡೋಣ. ಯಾಣದ ಹಸಿರೇ ನಮ್ಮ ಉಸಿರು.

ಯಾಣವನ್ನು ಉಳಿಸಲು ತಮ್ಮ ಸಲಹೆ – ಸೂಚನೆಗಳನ್ನು ಈ ಕೆಳಗಿನ ವಿಳಾಸಕ್ಕೆ ನೀಡಿ ಸಹಕರಿಸಿ.

ಪರಿಸರ ಸಂರಕ್ಷಣಾ ಕೇಂದ್ರ
ಹುಲೇಮಳಗಿ ಕಟ್ಟಡ
ಶಿರಸಿ (ಉ. ಕನ್ನಡ) ೫೮೧ ೪೦೧

ಪತ್ರಿಕಾ ಪ್ರಕಟಣೆ –4–3–97.

ಪರಿಸರ ಸಂರಕ್ಷಣಾ ಕೇಂದ್ರ,
ಹುಲೇಮಳಗಿ ಬ್ರದರ್ಸ್, ಚೌಕಿಮಠ,
ಶಿರಸಿ – 581 401.

psk F2B

# PRESS RELEASE

## Indiscriminate Tree Felling in Sharavati Valley of Western Ghats

Western Ghats is one of the well-known regions for its tropical forests. The flora and fauna of Sharavati valley is considered to be diverse and as rich as the *Silent Valley* in Kerala. Like *Silent Valley*, Sharavati is host for Lion tailed macaque, which is on the verge of extinction. Bombay Natural History Society has conducted a detail survey of Sharavati valley and it has reported that out of eighteen biodiversity hotspots all over the world, Sharavati valley is one among them. The construction of Sharavati Tail Race Project for generating hydro electricity will submerge 703 hectares of evergreen forests in Sharavati valley. In 1998 late Dr Kusma Sorab launched Appiko Movement (embracing trees) to save the forests of Sharavati valley. → environmentalist

Remaining forests of the valley in facing a severe threat from the Karnataka Forest Department (KFD). The Forest Department has carried on extensive felling of green trees in Sharavati valley. Recently, peoples' Organisation, *Parisara Sanmrakshana Kendra*, based in Sirsi, ~~in~~ Uttara Kannada district sent a team of Scientists and Researchers to investigate these felling. (The detail report is enclosed with press release).

The area where felling have taken place is Mahime (Forest Survey No 169). This is part of Gersoppa Forest Range in Honnavar Forest Division. This is not part of the submersion area of Sharavati Tail Race Project.

The findings are:

The KFD has felled green trees in violation of the State Government order. The surprising fact is, this extensive tree felling is going on a large scale even without the official sanction of the forest department.

**The team found that for extracting one tree 48 green trees with a girth of above 30 centimeters are felled. Further while felling one tree as many as 2860 small plants are cut. In order to transport the timber cut from one tree 295 square meters of forest area is clear felled.** → new road is ~~constructed~~ built for which

Any tree felling in natural forests has to be cleared by Ministry of Environment and Forests, Government of India. However, this felling was done without their permission. The felling of green trees have taken place in violation of State Government order passed in 1990 banning the cutting of green trees in natural forests. The clear felling of natural forests was banned in 1985. However, even this ban has been violated.

These felling are also in violation of the Supreme Court interim order dated 12.12.1996 in W.P.number 202/95.

Interestingly, it is in the same area that the Karnataka Forest Department has raised the cane plantations in 1997 with aid from Overseas Development Agency, United Kingdom. Due to the felling the cane plantations is destroyed.

This area is part of **'Kathle Kan'** (Black Forests) or the *sacred groves*. The KFD has called upon the people to protect sacred groves. Ironically, the same department is destroying the sacred grove. The department that has the responsibility to conserve the forests and sacred groves is destroying them.

We have heard that there are numerous cases of felling of green trees by KFD not only in Uttara Kannada, but also in many other regions of Western Ghats in Karnataka. If this trend of deforestation continues, the forests will disappear in few years. There is an immediate need put an end to felling and to investigate these and act against officials involved in this case.

In 1983, the people living in *Malenad* region of Western Ghats launched **Appiko Chaluvali** to save the forest resources. Due to pressure built up by the movement the State Government banned clear felling of natural forests and put a moratorium on felling of green trees. Now the time has come to revive the **Appiko Movement** to save the remaining natural forests in Western Ghats. *Parisara Sanmrakshana Kendra,* the Organisation behind *Appiko Chaluvali* has approached the Chief Minister and the Forest Minister and Ministry of Environment and Forests, Delhi to investigate the green felling in the state. It has also pressurised the government to initiate actions against the officials who have violated the rules.

PRESS RELEASE

**Parisara Sanmrakshana Kendra**
Hulemalgi Bros,
Chowkimath road,
SIRSI – 581 401
Uttara Kannada
KARNATAKA

October 27, 1999

PH: 08384-25139
Fax: 08384-27839

PSK F2B

ಪತ್ರಿಕಾ ಪ್ರಕಟಣೆ

**ಶರಾವತಿ ಕಣಿವೆಗೆ ಮತ್ತೊಂದು ಆಘಾತ!**

# ಅರಣ್ಯ ಇಲಾಖೆಯಿಂದಲೇ ಹಸಿಮರ ಕಡಿತ.

ಪಶ್ಚಿಮ ಘಟ್ಟದ ಜೀವ ವೈವಿಧ್ಯತೆಗೆ ಹೆಸರಾದ ಉತ್ತರ ಕನ್ನಡದ ಶರಾವತಿ ಕೊಳ್ಳದಲ್ಲಿ ವ್ಯಾಪಕವಾಗಿ ಅಕ್ರಮ ಹಸಿಮರ ಕಡಿತ ನಡೆದಿದೆ. ಒಣಮರ ಸಂಗ್ರಹದ ನೆಪದಲ್ಲಿ ಹಸಿಮರಗಳ ಲೂಟಿ ನಡೆದಿದ್ದು ಮರ ಸಾಗಾಟಕ್ಕಾಗಿ ಅಪುರೂಪದ ಕೊಳ್ಳದಲ್ಲಿ ಎಲ್ಲೆಂದರಲ್ಲಿ ರಸ್ತೆ ನಿರ್ಮಿಸಲಾಗಿದೆ. ಹೊನ್ನಾವರ ಅರಣ್ಯ ವಿಭಾಗದ ಗೇರಸೊಪ್ಪಾ ವಲಯದಲ್ಲಿನ ಮಹಿಮೆ ಅರಣ್ಯ ಪ್ರದೇಶದ ಸರ್ವೆ ನಂಬರ್ ೧೬೦ರಲ್ಲಿ ಈ ಕೃತ್ಯ ನಡೆದಿದ್ದು ಮರಕಡಿತ, ರಸ್ತೆ ನಿರ್ಮಾಣಕ್ಕಾಗಿ ೧.೧೮ ಹೆಕ್ಟೇರ್ ದಟ್ಟ ನಿತ್ಯ ಹರಿದ್ವರ್ಣ ಅರಣ್ಯ ಬಯಲಾಗಿದೆ.

ಶರಾವತಿ ಕೊಳ್ಳದಲ್ಲಿ ಹಸಿಮರ ಕಡಿತದ ಸುದ್ದಿಯ ಹಿನ್ನಲೆಯಲ್ಲಿ ಶಿರಸಿಯ ಪರಿಸರ ಸಂರಕ್ಷಣಾ ಕೇಂದ್ರ ವಿಜ್ಞಾನಿಗಳ, ಅಧ್ಯಯನಕಾರರ ತಂಡದೊಂದಿಗೆ ಇತ್ತೀಚೆಗೆ ಅಲ್ಲಿಗೆ ಭೇಟಿನೀಡಿ ಮರಕಡಿತದ ಪರಿಣಾಮಗಳ ವಿವರ ಅಧ್ಯಯನ ನಡೆಸಿದೆ. ಇಲ್ಲಿ ಕೇವಲ ಒಂದೊಂದು ಮರಕಡಿಯುವಾಗಲೂ ೨೯೫ ಚದರ ಮೀಟರ್ ಕ್ಷೇತ್ರ ಸಂಪೂರ್ಣ ಬಯಲಾಗಿದ್ದಲ್ಲದೇ ೩೦ ಸೆಂಟಿ ಮೀಟರ್‌ಗೂ ಅಧಿಕ ಗಾತ್ರದ ೪೮ ಹಸಿಮರಗಳು ಕಟಾವಾಗಿವೆ ಹಾಗು ೨೮೬೦ಕ್ಕೂ ಹೆಚ್ಚು ಸಣ್ಣ ಸಣ್ಣ ಸಸ್ಯಗಳು ನಾಶವಾಗಿವೆ. ಅರಣ್ಯ ಕಾನೂನುಗಳನ್ನೆ ಅಲಕ್ಷಿಸಿ ಅರಣ್ಯ ಇಲಾಖೆಯೇ ನಾಶದ ಕಾರ್ಯದಲ್ಲಿ ತೊಡಗಿದೆ.

ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸೈಟಿ ನಡೆಸಿದ ಅಧ್ಯಯನದ ಪ್ರಕಾರ ಪ್ರಪಂಚದ ಜೀವ ವೈವಿಧ್ಯತೆಯ ಹದಿನೆಂಟು ತಾಣಗಳ ಪೈಕಿ ಶರಾವತಿ ಕಣಿವೆಯೂ ಒಂದೆಂದು ಪ್ರಸಿದ್ಧಿ ಪಡೆದಿದೆ. ಈ ಕೊಳ್ಳ ಜೀವಜಾಲದ ತೊಟ್ಟಿಲಾಗಿದ್ದು ವಿನಾಶದ ಅಂಚಿನಲ್ಲಿರುವ ಸಿಂಗಳೀಕಗಳ ವಾಸಸ್ಥಾನ . ಆರ್ಕಿಡ್‌ಗಳು, ಬೆತ್ತದ ತಳಿಗಳು, ಅಪುರೂಪದ ಸಸ್ಯ ಪ್ರಭೇದಗಳಿಂದ ಸಂಮೃದ್ಧವಾಗಿದ್ದು ಕೇರಳದ ಮೌನ ಕಣಿವೆಯಷ್ಟೇ ಮಹತ್ವದ್ದೆಂಬುದನ್ನು ಹಲವು ವೈಜ್ಞಾನಿಕ ಸಂಶೋಧನೆಗಳು ಎತ್ತಿ ಹೇಳಿವೆ. ಇಂತಹ ಶ್ರೀಮಂತ ಕಾನನದ ೭೦೩ ಹೆಕ್ಟೇರ್ ಪ್ರದೇಶ ಈಗಾಗಲೇ ಶರಾವತಿ ಟೇಲರೇಸ್ ಜಲ ವಿದ್ಯುತ್ ಯೋಜನೆಗಾಗಿ ಧ್ವಂಸವಾಗಿದೆ. ಶರಾವತಿ ಕೊಳ್ಳದ ಸಂರಕ್ಷಣೆಗಾಗಿ ಪರಿಸರ ಚಳುವಳಿಗಳು ೧೯೮೦ರ ದಶಕದಿಂದಲೇ ನಡೆಯುತ್ತಿವೆ. ಇವನ್ನೆಲ್ಲ ಅಲಕ್ಷಿಸಿ ಜಲ ವಿದ್ಯುತ್ ಯೋಜನೆಗಾಗಿ ಅರಣ್ಯ ಬಲಿ ಕೊಡಲಾಗಿದೆ. ಇದರ ಬೆನ್ನ ಹಿಂದೆಯೇ ಯೋಜನೆಯಿಂದ ಅಳಿದುಳಿದ ಅರಣ್ಯ ಸಂಪತ್ತಿಗೆ ಮತ್ತೊಂದು ಆಘಾತ ಒದಗಿದೆ. ಅರಣ್ಯ ಸಂರಕ್ಷಣೆಯ ಜವಾಬ್ದಾರಿ ಹೊತ್ತ ಅರಣ್ಯ ಇಲಾಖೆಯೇ ಅರಣ್ಯ ನಾಶದ ಕಾರ್ಯದಲ್ಲಿ ಭಾಗಿಯಾದ್ದು ಪಶ್ಚಿಮ ಘಟ್ಟದ ಸಂರಕ್ಷಣೆಯ ದಾರಿಯಲ್ಲಿ ಆತಂಕ ಕವಿದಿದೆ.

## ಅರಣ್ಯ ಇಲಾಖೆಯಿಂದಲೇ ಕಾನೂನುಗಳ ಉಲ್ಲಂಘನೆ.

ಮಹಿಮೆ ಅರಣ್ಯ ಪ್ರದೇಶದಲ್ಲಿ ಒಣ ಮರ ಸಂಗ್ರಹಕ್ಕೆ ಅರಣ್ಯ ಇಲಾಖೆಯಿಂದ ಯಾವುದೇ ಅಧಿಕೃತ ಒಪ್ಪಿಗೆಯಿಲ್ಲ. ಆಶ್ಚರ್ಯಕರ ಸಂಗತಿಯೆಂದರೆ ಸ್ವತಃ ಅರಣ್ಯ ಇಲಾಖೆಯೇ ಇಲ್ಲಿನ ಕಾಮಗಾರಿಗಳನ್ನು ೧೯೯೯ರ ಮೇ ತಿಂಗಳಿನಲ್ಲಿ ಖುದ್ದಾಗಿ ಮಾಡಿಸಿದೆ. ಒಣ ಮರ ಸಂಗ್ರಹದ ನೆಪದಲ್ಲಿ ಹಸಿಮರಗಳು ಗರಗಸದ ಪಾಲಾಗಿವೆ. ಕೇಂದ್ರ ಅರಣ್ಯ ಮತ್ತು ಪರಿಸರ ಮಂತ್ರಾಲಯ ನೈಸರ್ಗಿಕ ಅರಣ್ಯದಲ್ಲಿನ ಒಣ ಅಥವಾ ಹಸಿಮರ ಕಡಿತವೆಲ್ಲವನ್ನೂ ಸಂಪೂರ್ಣವಾಗಿ ನಿಶೇಧಿಸಿದೆ. ಹಾಗಿದ್ದಾಗ್ಯೂ ಯಾವುದೇ ಪೂರ್ವಾನುಮತಿಯಿಲ್ಲದೇ ಇಲ್ಲಿ ಮರ ಕಡಿಯಲಾಗಿದೆ. ಇದು ಸರ್ವೋಚ್ಚ ನ್ಯಾಯಾಲಯದ ೧೯೯೬ರ ಡಿಸೆಂಬರ್ ೧೨ರ ಮಧ್ಯಂತರ ಆದೇಶ (W.P.number 202/95 )ದ ಉಲ್ಲಂಘನೆಯಾಗಿದೆ. ಇದಲ್ಲದೇ ಹಸಿಮರ ಕಡಿತವನ್ನು ಕರ್ನಾಟಕದಲ್ಲಿ ೧೯೯೦ರಲ್ಲೆ ನಿಶೇದಿಸಲಾಗಿದೆ. ಇಲ್ಲಿನ ಮರ ಕಡಿತ ಅರಣ್ಯ ಕಾಯ್ದೆಯ ಸ್ಪಷ್ಟ ಉಲ್ಲಂಘನೆಯಾಗಿದೆ. ಕರ್ನಾಟಕದಲ್ಲಿ ನೈಸರ್ಗಿಕ ಕಾಡು ಕಡಿದು ☛ -೨

ಬಯಲಾಗಿಸುವ ಪರಂಪರಾಗತ ಕ್ರಮಕ್ಕೆ ೧೯೮೩ರಲ್ಲಿ ಕಾನೂನಿನ ತಡೆ ಬಿದ್ದಿದೆ. ಆದರೆ ಈಗ ಇಲ್ಲಿ ಕಾಡು ಕಡಿದು ಬಯಲಾಗಿದೆ. ಕೇಂದ್ರ, ಹಾಗು ರಾಜ್ಯ ಸರಕಾರಗಳು ಇಷ್ಟೇಲ್ಲ ಬಿಗಿ ಕಾನೂನುಗಳನ್ನು ರೂಪಿಸಿದ್ದಾಗ್ಯೂ ಅರಣ್ಯ ನಾಶ ಅವ್ಯಾಹತವಾಗಿದೆ. ಕಾನೂನು ಜಾರಿಯ ಜವಾಬ್ದಾರಿ ಹೊತ್ತ ಅಧಿಕಾರಿಗಳೇ ಕಾನೂನು ಬಾಹಿರ ಕೃತ್ಯದಲ್ಲಿ ತೊಡಗಿ ಪರಿಸರ ನಾಶ ಗೈಯುತ್ತಿರುವದು ಕರ್ನಾಟಕದ ಫಶ್ಚಿಮ ಘಟ್ಟದ ಪರಿಸರ ಧುರಂತದ ವೈರುಧ್ಯವಾಗಿದೆ.

## ಅರಣ್ಯ ಸಂರಕ್ಷಣೆಯ ನಾಟಕ.

೧೯೯೬-೯೭ರಲ್ಲಿ ಬ್ರಿಟನ್‌ನ ಸಾಗರೋತ್ತರ ಅಭಿವೃದ್ಧಿ ನೆರವಿನಿಂದ ಮಹಿಮೆಯ ೭೦ ಹೆಕ್ಟೇರ್ ಪ್ರದೇಶದಲ್ಲಿ ಇಲಾಖೆ ಬೆತ್ತದ ನೆಡುತೋಪು ಬೆಳೆಸಿದೆ. ಅವೆಲ್ಲವನ್ನೂ ನಾಶಗೊಳಿಸಿ ಮರ ಕಡಿತ ನಡೆದಿದೆ. ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕ ಅರಣ್ಯ ಇಲಾಖೆ ದೇವರ ಕಾಡುಗಳ ಸಂರಕ್ಷಣೆಯ ಬಗೆಗೆ ಮಾತಾಡುತ್ತಿದೆ. ಆದರೆ ಇದೇ ಇಲಾಖೆ **ಕತ್ತಲೆ ಕಾನು** ಎಂದೇ ರಾಜ್ಯದಲ್ಲಿ ಪ್ರಸಿದ್ಧವಾದ ಗೇರಸೊಪ್ಪಾದ ಮಹಿಮಾ ಪ್ರದೇಶವನ್ನು ಬಯಲಾಗಿಸಿದೆ.

ಶರಾವತಿ ಕಣಿವೆಯಲ್ಲಿ ನಡೆದ ಹಸಿಮರ ಕಡಿತದ ಘಟನೆಯಂತೆ ಉತ್ತರ ಕನ್ನಡದ ನೈಸರ್ಗಿಕ ಕಾಡುಗಳೂ ಸೇರಿದಂತೆ ಕರ್ನಾಟಕದ ಪಶ್ಚಿಮ ಘಟ್ಟಗಳ ಬಹುತೇಕ ಕಡೆ ಇದೇ ರೀತಿ ವ್ಯಾಪಕ ಅರಣ್ಯ ನಾಶ ನಡೆದಿರುವ ಮಾಹಿತಿಯಿದೆ. ನಾಶ ಹೀಗೆ ಮುಂದುವರಿದರೆ ಅಪುರೂಪದ ಅರಣ್ಯಗಳು ಇನ್ನು ಕೆಲವೇ ವರ್ಷಗಳಲ್ಲಿ ಕಣ್ಮರೆಯಾಗಲಿವೆ. ಮಹಿಮೆ ಪ್ರದೇಶದ ಶರಾವತಿ ಕೊಳ್ಳ ನಾಶದ ಘಟನೆಯ ಬಗೆಗೆ ಸೂಕ್ತ ತನಿಖೆ ನಡೆಸಿ ಇದಕ್ಕೆ ಕಾರಣಕರ್ತರಾದ ಅರಣ್ಯ ಇಲಾಖೆಯ ಅಧಿಕಾರಿಗಳ ಮೇಲೆ ಕಾನೂನಿನ ಶಿಸ್ತು ಕ್ರಮ ಕೈಗೊಳ್ಳಬೇಕಾಗಿದೆ.

೧೯೮೩ರಲ್ಲಿ ಅರಣ್ಯನಾಶದ ವಿರುದ್ಧ ಮಲೆನಾಡಿನ ಜನ **ಅಪ್ಪಿಕೋ ಚಳುವಳಿ** ನಡೆಸಿದ್ದಾರೆ. ಇದರ ಪರಿಣಾಮ ರಾಜ್ಯದಲ್ಲಿ ಹಸಿಮರ ಕಡಿತದ ನಿಶೇಧವಾಗಿದೆ. ಇದಲ್ಲದೇ ೧೯೯೮ರಲ್ಲಿ ಖ್ಯಾತ ಪರಿಸರ ಹೋರಾಟಗಾರ್ತಿ ಡಾ! ಕುಸುಮಾ ಸೊರಬರ ನೇತ್ರತ್ವದಲ್ಲಿ ಶರಾವತಿ ಕೊಳ್ಳದ ಸಂರಕ್ಷಣೆಗಾಗಿ ಅಪ್ಪಿಕೋ ಚಳುವಳಿ ನಡೆದಿದೆ. ಈಗ ಅಳಿದುಳಿದ ನೈಸರ್ಗಿಕ ಕಾಡುಗಳನ್ನು ಉಳಿಸುವದಕ್ಕಾಗಿ ಮತ್ತೆ ಚಳುವಳಿ ಅನಿವಾರ್ಯವಾಗಿದೆ. ಶರಾವತಿ ಕೊಳ್ಳದ ಹಸಿಮರ ಕಡಿತಕ್ಕೆ ಸಂಬಂಧಿಸಿದಂತೆ ಕೇಂದ್ರದ ಅರಣ್ಯ ಹಾಗು ಪರಿಸರ ಮಂತ್ರಿಗಳಿಗೆ ಹಾಗು ಕರ್ನಾಟಕದ ಮುಖ್ಯಮಂತ್ರಿಗಳಿಗೆ, ಅರಣ್ಯ ಸಚಿವರಿಗೆ ಈಗಾಗಲೇ ಶಿರಸಿಯ ಪರಿಸರ ಸಂರಕ್ಷಣಾ ಕೇಂದ್ರ ವಿವರ ಪತ್ರ ಬರೆದಿದ್ದು ರಾಜ್ಯದ ಪಶ್ಚಿಮ ಘಟ್ಟದಲ್ಲಿ ನಡೆದ ವ್ಯಾಪಕ ಹಸಿಮರ ಕಡಿತದ ಬಗೆಗೆ ಸಮಗ್ರ ತನಿಖೆ ನಡೆಸಬೇಕೆಂದು ಆಗ್ರಹಿಸಿದೆ.

**ದಿನಾಂಕ: ೨೭ ಅಕ್ಟೋಬರ್೧೯೯೯**

ಪರಿಸರ ಸಂರಕ್ಷಣಾ ಕೇಂದ್ರ, ಶಿರಸಿ.

ಪಾಂಡುರಂಗ ಹೆಗಡೆ.

**ಪರಿಸರ ಸಂರಕ್ಷಣಾ ಕೇಂದ್ರ**
ಹುಲೇಮಳಗಿ ಕಟ್ಟಡ
**ಶಿರಸಿ (ಉ, ಕನ್ನಡ) ೫೮೧ ೪೦೧**

ವಿಳಾಸ:
ಪರಿಸರ ಸಂರಕ್ಷಣಾ ಕೇಂದ್ರ.
ಹುಲೇಮಳಗಿ ಬ್ರದರ್ಸ್.
ಚೌಕಿಮಠ ರಸ್ತೆ. ಶಿರಸಿ.೫೮೧೪೦೧
ಉತ್ತರ ಕನ್ನಡ ಜಿಲ್ಲೆ. ಕರ್ನಾಟಕ. ದೂರವಾಣಿ೦೮೩೮೪-೨೫೧೩೯ಫ್ಯಾಕ್ಸ ೦೮೩೮೪-೨೭೮೩೯

# ಪರಿಸರ ಸಂರಕ್ಷಣಾ ಕೇಂದ್ರ, ಶಿರಸಿ.

ಚೌಕಿಮಠ ರಸ್ತೆ, ಹುಲೇಮಳಗಿ ಕಟ್ಟಡ ಶಿರಸಿ. ೫೮೧೪೦೨.


**ಪತ್ರಿಕಾ ಪ್ರಕಟಣೆ.** ದಿನಾಂಕ : ೧೮ ನವೆಂಬರ್ ೧೯೯೯

### ಹೊನ್ನಾವರ ಉಪ ಅರಣ್ಯ ಸಂರಕ್ಷಣಾಧಿಕಾರಿ ಹೇಳಿಕೆಗೆ ಪ್ರತಿಕ್ರೀಯೆ.

## ಶರಾವತಿ ಕಣಿವೆಯಲ್ಲಿ ಹಸಿಮರ ಕಡಿತ ಮುಚ್ಚಿಹಾಕುವ ಪ್ರಯತ್ನ ಬೇಡ.

ಪಶ್ಚಿಮ ಘಟ್ಟದ ಉದ್ದಕ್ಕೂ ಒಣ ಮರತೆಗೆಯುವ ನೆಪದಲ್ಲಿ ನೈಸರ್ಗಿಕ ಅರಣ್ಯಗಳು ವರ್ಷದಿಂದ ವರ್ಷಕ್ಕೆ ನಾಶವಾಗುತ್ತಿವೆ. ಇದಕ್ಕಾಗಿ ಕಾಡಿನಲ್ಲಿ ಹೊಸ ಹೊಸ ರಸ್ತೆಗಳು ನಿರ್ಮಾಣವಾಗುತ್ತಿವೆ. ಈ ಹಿಂದೆ ಯಲ್ಲಾಪುರದ ಸಾವಗದ್ದೆಯಲ್ಲಿ ನಡೆದಂತಹ ಹಸಿಮರ ಕಡಿತದ ಘಟನೆಗಳು ಉತ್ತರ ಕನ್ನಡದಲ್ಲಿ ನಡೆಯುತ್ತಲೇ ಇವೆ. ಈಗ ಶರಾವತಿ ಕಣಿವೆಯಲ್ಲಿ ಹಸಿಮರ ನಾಶದ ಪ್ರಕರಣ ಒಂದು ಉದಾಹರಣೆ ಮಾತ್ರ. ಇದಲ್ಲದೇ ಜಿಲ್ಲೆಯ ಹೊನ್ನಾವರ, ಶಿರಸಿ, ಯಲ್ಲಾಪುರ, ಜೋಯಿಡಾಗಳಲ್ಲಿ ಹಲವೆಡೆ ಇಂಥಹುದೇ ಪ್ರಕರಣಗಳು ನಡೆದಿವೆ. ನಾಶದ ಕಾರಣಗಳ ಸಮಗ್ರ ತನಿಖೆ ನಡೆಯಬೇಕಾಗಿದೆ. ಇಂತಹ ಕೃತ್ಯಗಳ ಬಗೆಗೆ ಇಲಾಖೆಯ ನಿಲುವುಗಳನ್ನು ಅರಿಯುವದಕ್ಕೆ ಶರಾವತಿ ಕಣಿವೆಯ ನಾಶದ ಘಟನೆಗೆ ಇಲಾಖೆ ನೀಡಿದ ಪ್ರತಿಕ್ರೀಯೆ ಮಾದರಿಯಾಗಿದೆ. ಹಿರಿಯ ಅಧಿಕಾರಿಗಳು ಮುಕ್ತ ಮನಸ್ಸಿನಿಂದ ತನಿಖೆಗೆ ಮುಂದಾಗುವದು ಬಿಟ್ಟು ಪ್ರಕರಣ ಮುಚ್ಚಿಹಾಕಲು ಯತ್ನಿಸುವದು ಈಗಾಗಲೇ ಹೊನ್ನಾವರ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಸುದೀರ್ಘ ಪತ್ರಿಕಾ ಹೇಳಿಕೆ ದೃಢ ಪಡಿಸಿದೆ.

ಶರಾವತಿ ಕಣಿವೆಯಲ್ಲಿ ಅತಿಕ್ರಮಣ ಪ್ರಯತ್ನ ನಡೆದ ಕಾರಣ ಅಲ್ಲಿನ ಮಹಿಮೆ ಪ್ರದೇಶದ ಒಣ ಮರ ಕಡಿತವನ್ನು ಅರಣ್ಯ ಇಲಾಖೆ ಮಾಡಬೇಕಾಯಿತು ಎಂದು ಹೊನ್ನಾವರ ಉಪ ಅರಣ್ಯ ಸಂರಕ್ಷಣಾಧಿಕಾರಿ ಪ್ರತಿಕ್ರೀಯಿಸಿದ್ದಾರೆ. ಹಾಗೊಮ್ಮೆ ಅತಿಕ್ರಮಣ ಪ್ರಯತ್ನ ನಡೆದ ಪಕ್ಷದಲ್ಲಿ ಅಲ್ಲಿನ ಅತಿಕ್ರಮಣದಾರರ ಹೆಸರು ಪ್ರಕಟಿಸಲಿ. ಅವರ ಮೇಲೆ ಕಾನೂನು ಕ್ರಮ ಜರುಗಿಸುವದು ಬಿಟ್ಟು ಅರಣ್ಯ ಕಟಾವೇ ಅರಣ್ಯ ಸಂರಕ್ಷಿಸುವ ಇಲಾಖೆಗೆ ಏಕೆ ಪ್ರಧಾನವಾಯಿತು.? ಅತಿಕ್ರಮಣದಿಂದ ಅರಣ್ಯ ಉಳಿಸುವ ಕಾಳಜಿ ಇಲಾಖೆಗೆ ಇಲ್ಲ. ಹಾಗಿದ್ದರೆ ಒಣಮರ ಕಡಿತದ ನೆಪವಾಗಿ ಹೇರಳ ಪ್ರಮಾಣದ ಕಾಡು ಬೋಳಿಸುವ ಕಾರ್ಯ ಮಾಡುತ್ತಿರಲಿಲ್ಲ. ಕಾನೂನು ಬಾಹಿರವಾಗಿ ಕಾಡಿನಮರ ಕಡಿದು ಲೂಟಿ ಹೊಡೆಯುವ ಹುನ್ನಾರ ಇದಾಗಿರಬಹುದು. ಇಲಾಖೆ ತಾನೇ ಸ್ವತಃ ನೈಸರ್ಗಿಕ ದಟ್ಟ ಕಾಡಿನಲ್ಲಿ ವ್ಯವಸ್ಥಿತ ರಸ್ತೆ ನಿರ್ಮಿಸಿ ಅತಿಕ್ರಮಣಕ್ಕೆ ಇನ್ನಷ್ಟು ಅನುಕೂಲ ಒದಗಿಸಿದೆ. ಹೀಗಿರುವಾಗ 'ಅರಣ್ಯ ಅತಿಕ್ರಮಣ ಪ್ರಯತ್ನ ನಡೆದಿತ್ತೆಂಬುದು' ಹಸಿಮರ ಕಡಿತ ಪ್ರಕರಣಕ್ಕೆ ಹಿನ್ನಲೆಯಾಗಿ ಇಲಾಖೆಯ ಅಧಿಕಾರಿಗಳು ಸೃಷ್ಟಿಸಿರುವ ಬೇನಾಮಿ ಪ್ರಕರಣವಾಗಿದೆ. ಇದೇ ಹೊನ್ನಾವರ ಅರಣ್ಯ ವಿಭಾಗದ ಯಾಣದ ಕಾಡಿನಲ್ಲಿ ಇಲಾಖೆಯ ನೌಕರರೇ ಅತಿಕ್ರಮಣದಲ್ಲಿ ತೊಡಗಿ ಅರಣ್ಯನಾಶ ಮಾಡಿದ್ದಕ್ಕೆ ಇಲಾಖೆ ಮೌನವಾಗಿ ಪ್ರೋತ್ಸಾಹಿಸುತ್ತಿದೆ. ಈಗ ಅಧಿಕಾರಿಗಳು ಇಲ್ಲಿ ಅತಿಕ್ರಮಣದ ಬಗೆಗೆ ಕಾಳಜಿ ತೋರಿಸಿದ್ದು ಆಶ್ಚರ್ಯಕರ ಸಂಗತಿ.

ಒಣ ಮರಗಳ ಪಕ್ಕದಲ್ಲಿ ಹಸಿ ಗಿಡಮರಗಳಿದ್ದರೆ ಅದಕ್ಕೆ ಯಾವುದೇ ಹಾನಿ ಮಾಡಬಾರದು.'ಲಾಗಿಂಗ್ ಮಾಡುವಾಗ ೮೦ಸೆಂಟಿ ಮೀಟರ್ ಸುತ್ತಳತೆಯ ಗಾತ್ರದ ಗಿಡನಾಶವಾದರೆ ಮಾತ್ರ, ತಾಂತ್ರಿಕವಾಗಿ ಮರನಾಶವಾಗಿದೆ' ಎಂದು ಅಧಿಕಾರಿ ಹೇಳಿದ್ದಾರೆ. ಇಲಾಖೆಯ ಲಾಗಿಂಗ್ ಒಪ್ಪಂದ ಪತ್ರದ ಪ್ರಕಾರ ೪೫ ಸೆಂಟಿ ಮೀಟರ್ ಗಾತ್ರದ ಗಿಡ ನಾಶವಾದರೆ ಅವುಗಳ ಲೆಕ್ಕವನ್ನು ಕಾಮಗಾರಿ ಅಧಿಕಾರಿ (ಫಾರೇಸ್ಟರ್) ....೨

ಲೆಕ್ಕ ಹಾಕಿ ಇಲಾಖೆಗೆ ವರದಿ ಸಲ್ಲಿಸಬೇಕಾಗುತ್ತದೆ. ಇಲಾಖೆಯ ನಿಯಮ ಹೀಗಿರುವಾಗ ಒಣಮರ ಕಟಾವಿನ ಸಂದರ್ಭದಲ್ಲಿ ಇಲಾಖೆಯ ಲೆಕ್ಕದ ಪ್ರಕಾರ ಎಷ್ಟು ಮರ ನಾಶವಾಗಿದೆ ಎಂಬುದನ್ನು ಬಹಿರಂಗ ಪಡಿಸಬಹುದಿತ್ತು. ಇಂತಹ ಕ್ರಿಯಾತ್ಮಕ ಕಾರ್ಯಕ್ಕೆ ಹೋಗದೇ ಹಸಿಮರ ಕಟಾವು ನಡೆದಿಲ್ಲವೆಂದು ಹೇಳುವದು ಇಲಾಖೆಗೆ ಶೋಭೆ ತರದು.

೧೯೯೭-೯೮ ಅಥವಾ ೧೯೯೮-೯೯ರ ವರ್ಕಿಂಗ್‌ಲೀಸ್ಟ್‌ನಲ್ಲಿ ಮಹಿಮೆ ಪ್ರದೇಶದಲ್ಲಿ ಒಣಮರ ತೆಗೆಯಲು ಯಾವುದೇ ಒಪ್ಪಿಗೆ ಇಲ್ಲವೆಂಬುದನ್ನು ಇಲಾಖೆಯ ದಾಖಲೆಗಳೇ ಹೇಳುತ್ತವೆ. ಈ ಅವದಿಯಲ್ಲಿ ಶರಾವತಿ ಟೇಲರೇಸ್ ಯೋಜನೆಗಾಗಿ ಮಾತ್ರ, ಸರ್ವೆ ನಂಬರ್ ೧೫೯ರಲ್ಲಿ ಮರಕಡಿತಕ್ಕೆ ಪರವಾನಿಗೆ ನೀಡಲಾಗಿದೆಯೇ ಹೊರತು ಸರ್ವೆ ನಂಬರ್ ೧೬೦ರಲ್ಲಿ ಲಾಗಿಂಗ್‌ಗೆ ಒಪ್ಪಿಗೆಯಿಲ್ಲ. ಇನ್ನು ಅಧಿಕಾರಿ ಉಲ್ಲೇಖಿಸಿದಂತೆ ೩೩೮ ಒಣ ಮರ ನಿಶಾನೆ ಮಾಡಿದ್ದು ದಾಖಲೆಯಲ್ಲಿಲ್ಲ. ಇಲ್ಲಿ ಕಟಾವಿಗೆ ಪರವಾನಗಿ ಕೇಳಿ ಬರೆದ ಪತ್ರ, ಎಂದೂ ಕಟಾವಿಗೆ ಸಮ್ಮತಿಸಿದಂತಾಗುವದಿಲ್ಲ. **ಪರವಾನಗಿ ನಿರೀಕ್ಷೆಯಲ್ಲಿ ಕಾಮಗಾರಿ ನಡೆಸಿದ್ದು ಕಾನೂನು ಬಾಹಿರವಾಗುತ್ತದೆ.** ಇದೇ ಹಿನ್ನಲೆಯಲ್ಲಿ ಇಲ್ಲಿ ಕಡಿದ ಮರಗಳನ್ನು ಹೊನ್ನಾವರ ಡಿಪೋದಲ್ಲಿ **ಡಂಪಿಂಗ್ ರಜಿಸ್ಟರ್‌ನಲ್ಲಿ** ದಾಖಲಿಸಲಾಗಿದೆ. ಈ ಸತ್ಯವನ್ನು ಮುಚ್ಚಿಡುವ ಪ್ರಯತ್ನ ಬೇಡ. ತಪ್ಪಿತಸ್ಥರ ಮೇಲೆ ಕಾನೂನು ಕ್ರಮ ಜರುಗಿಸುವ ಆದರ್ಶ ಹಿರಿಯ ಅಧಿಕಾರಿಗಳು ತೋರಬೇಕು.

ಬ್ರಿಟನ್ ನೆರವಿನಿಂದ ಪಶ್ಚಿಮ ಘಟ್ಟ ಅರಣ್ಯಾಭಿವೃದ್ಧಿ ಮಾಡುವ ಹೆಸರಿನಲ್ಲಿ ಹಣ ಖರ್ಚುಮಾಡಿ ಬೆಳೆಸಿದ ಬೆತ್ತದ ನೆಡುತೋಪು ಇಲ್ಲಿನ ಮರಕಡಿತದ ಸಂದರ್ಭದಲ್ಲಿ ನಾಶವಾಗಿದೆ. ಇದರ ಬಗೆಗೆ ಉಪ ಸಂರಕ್ಷಣಾಧಿಕಾರಿಗಳು ಯಾವ ಪ್ರತಿಕ್ರೀಯೆ ನೀಡದೇ ಮೌನವಾಗಿರುವದು ಏಕೆ ?

ಕಣಿವೆಯಲ್ಲಿ ನೂತನ ರಸ್ತೆ ಮಾಡಿಲ್ಲ ಅಲ್ಲಿದ್ದ ಹಳೆಯ ಲಾಗಿಂಗ್ ರಸ್ತೆ ಬಳಸಲಾಗಿದೆ ಎಂದು ಅಧಿಕಾರಿ ಹೇಳಿದ್ದಾರೆ. ಹಾಗೆ ನೋಡಿದರೆ ಈ ಶಬ್ದವೇ ಕಾನೂನು ಬಾಹಿರ. ಲಾಗಿಂಗ್ ಕಾಮಗಾರಿ ನಡೆಯುವಾಗ ಅದರ ನಿಗಾ ವಹಿಸಬೇಕಾದ ಕಾಮಗಾರಿ ಪಾರೆಸ್ಟರ್‌ಗೆ ವಲಯ ಅರಣ್ಯಾಧಿಕಾರಿ ನೀಡುವ ಸೂಚನಾ ಪತ್ರ ಹೇಳುತ್ತದೆ. 'ಕಾಡಿನಲ್ಲಿ ಯಾವುದೇ ರಸ್ತೆ ನಿರ್ಮಿಸಬಾರದು. ರಸ್ತೆಯ ಪಕ್ಕದಲ್ಲಿದ್ದ ಒಣಮರ ಮಾತ್ರ ಕಡಿಯಬಹುದು.' ವಸ್ತುಸ್ಥಿತಿ ಹೀಗಿರುವಾಗ ಕಾಡಿನಲ್ಲಿ ಯಾವ ರಸ್ತೆಯಿರಲು ಸಾಧ್ಯವಿಲ್ಲ.

ಅರಣ್ಯ ಅಧ್ಯಯನಕ್ಕೆ ಹೋಗುವಾಗ ಇಲಾಖೆಯ ಪರವಾನಗಿ ಪಡೆಯದೇ ಹೋದದ್ದು ತಪ್ಪಾಗಿದ್ದರೆ ಅದನ್ನು ಒಪ್ಪಿಕೊಳ್ಳುತ್ತೇವೆ. ನಾವು ಅಧ್ಯಯನ ನಡೆಸಿದ್ದು ನಾಶದ ಪ್ರಮಾಣ ಅರಿತು ಸಂರಕ್ಷಣೆಯ ಬಗೆಗೆ ಆಸಕ್ತರ ಗಮನಸೆಳೆಯುವ ಉದ್ದೇಶದಿಂದ ಎಂಬುದನ್ನು ಅಧಿಕಾರಿ ಗಮನಿಸಬೇಕು. ಹಾಗೇ ನೋಡಿದರೆ ' ಇಲಾಖೆಯ ಇತಿಹಾಸದಲ್ಲಿ ಅಧಿಕಾರಿಗಳೇ ಸ್ವಪ್ರೇರಣೆಯಿಂದ ಒಣ ಮರ ಕಟಾವಿನ ಸಂದರ್ಭದಲ್ಲಾಗುವ ಹಸಿಮರ ಕಡಿತದಂತಹ ಘಟನೆಗಳನ್ನು ಪತ್ರಿಕೆಗಳಲ್ಲಿ ಬಹಿರಂಗ ಪಡಿಸಿದ ಉದಾಹರಣೆಗಳು ಕಡಿಮೆ. ತಪ್ಪಿತಸ್ಥ ಅಧಿಕಾರಿಗಳು, ಅರಣ್ಯ ಗುತ್ತಿಗೆದಾರರ ಮೇಲೆ ಪ್ರಕರಣ ದಾಖಲಿಸಿದ ಸಂದರ್ಭಗಳು ವಿರಳ. ಅಧಿಕಾರಿಗಳು ಪ್ರಾಮಾಣಿಕರಾಗಿದ್ದರೆ ನಮಗೆ ಕಾಡು ತಿರುಗುವ ಶ್ರಮದ ಅಗತ್ಯವಿರಲಿಲ್ಲ. ಹೀಗಿದ್ದಾಗ್ಯೂ ಪರಿಸರ ಆಸಕ್ತರು, ಹಳ್ಳಿಗರು, ಪತ್ರಕರ್ತರು ಇವನ್ನು ಬಹಿರಂಗ ಪಡಿಸಿದಾಗ ಘಟನಾ ಸ್ಥಳಕ್ಕೆ ಭೇಟಿ ನೀಡಿ ವಸ್ತುಸ್ಥಿತಿಯ ವರದಿ ನೀಡುವ ಪರಿಪಾಟವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ರೂಡಿಸಿಕೊಳ್ಳಬೇಕು. ನಾಶದ ಪ್ರಕರಣ ಮುಚ್ಚಿ ಹಾಕಲು ತೋರುವ ಮುತುವರ್ಜಿ ಕಡಿಮೆಯಾಗಿ ಅರಣ್ಯ ಸಂರಕ್ಷಣೆಯ ಕಾಳಜಿ ನೇಮಕವಾದ ಅಧಿಕಾರಿಗಳಲ್ಲಿ ಇನ್ನಷ್ಟು ಬರಲಿ. ಹಸಿಮರ ಕಡಿತದ ಬಗೆಗೆ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಿ ಮುಂದೆ ಇಂತಹ ಘಟನೆ ಮರುಕಳಿಸದಂತೆ ಎಚ್ಚರ ವಹಿಸಬೇಕೆಂದು ಪರಿಸರ ಸಂರಕ್ಷಣಾ ಕೇಂದ್ರ ಮತ್ತೊಮ್ಮೆ ಆಗ್ರಹಿಸಿದೆ. ನೈಸರ್ಗಿಕ ಅರಣ್ಯಗಳು ಒಣಮರ ಸಂಗ್ರಹದ ನೆಪದಲ್ಲಿ ನಾಶಗೊಳ್ಳುತ್ತಿರುವದನ್ನು ತಡೆಗಟ್ಟುವ ಕಾರ್ಯಕ್ರಮಗಳು ಜಾರಿಯಾಗದಿದ್ದರೆ ಪಶ್ಚಿಮ ಘಟ್ಟದ ಅಪುರೂಪದ ಜೀವವೈವಿಧ್ಯದ ಖಜಾನೆ ಇನ್ನು ಕೆಲವೇ ವರ್ಷಗಳಲ್ಲಿ ಬರಿದಾಗುವ ಅಪಾಯವಿದೆ.

ಸ್ಥಳ: ಶರಾವತಿ ಕಣಿವೆ ( ಮಹಿಮೆ)

**ಪರಿಸರ ಸಂರಕ್ಷಣಾ ಕೇಂದ್ರ**
ಹುಲೇಮಳಗಿ ಕಟ್ಟಡ
**ಶಿರಸಿ (ಉ॥ ಕನ್ನಡ) ೫೮೧ ೪೦೦**